ರೈತರಿಂದ ರೈತರಿಗಾಗಿ ರೈತರಿಗೋಸ್ಕರ

# ಕೃಷಿ ಕ್ರಾಂತಿ

ಉಚಿತ ವಿತರಣೆ

ಸಂಪುಟ - 1 ಸಂಚಿಕೆ - 1 ಸಂಪಾದಕರು: ಕೆ.ಆರ್.ಹುಲ್ಲುನಾಚೇಗೌಡ ಆಂತರಿಕ ಪ್ರಸಾರ

## ಆಶಯ



**ಶ್ರೀ ಕೆ.ಆರ್. ಹುಲ್ಲುನಾಚೇಗೌಡ**
ಎಂ.ಎಸ್ಸಿ., (ರೇಷ್ಮೆ ಕೃಷಿ)
ಅಧ್ಯಕ್ಷರು,
ಸಸ್ಯ ಸಂಜೀವಿನಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ (ರಿ)

ವಿಷಮುಕ್ತ ಮಣ್ಣು, ವಿಷಮುಕ್ತ ನೀರು, ವಿಷಮುಕ್ತ ಆಹಾರ ಎಂಬ ಧ್ಯೇಯದೊಂದಿಗೆ ಅತ್ಯಾಧುನಿಕ ವೈಜ್ಞಾನಿಕ ಕೃಷಿ ತಂತ್ರಜ್ಞಾನಗಳನ್ನು ಪರಿಸರ ಸ್ನೇಹಿಯಾಗಿ ಪರಿಸರಕ್ಕೆ ಪೂರಕವಾಗಿ ಬಳಸಿ ಹೊಸ ಕೃಷಿ ಕ್ರಾಂತಿಗೆ ನಾಂದಿ ಹಾಡಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಾವಯವ ಕೃಷಿಯ ಬಗ್ಗೆ ಜ್ಞಾನ ಹಾಗೂ ಅರಿವು ಮೂಡಿಸಿ ಕೃಷಿಯಲ್ಲಿ ಹೊಸ ಚೈತನ್ಯ ಮೂಡಿಸಲು ಸಸ್ಯ ಸಂಜೀವಿನಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ (ರಿ) ಹುಟ್ಟು ಹಾಕಿ, ನಾನು ಹಾಗೂ ನಮ್ಮ ಟ್ರಸ್ಟ್‌ನ 9 ಜನ ಸದಸ್ಯರ ಸಹಕಾರದಿಂದ ನಾವು ರೈತ ಸಮುದಾಯಕ್ಕೆ ನಮ್ಮ ಅಳಿಲು ಸೇವೆಯನ್ನು ಮಾಡುತ್ತಿದ್ದೇವೆ. ಪುಸ್ತಕ, ಪತ್ರಿಕೆ, ಲೇಖನ ಹಾಗೂ ಉದಯ ಟಿವಿಯಲ್ಲಿ ಕೃಷಿಯ ಅನೇಕ ಸಮಸ್ಯೆಗಳಿಗೆ ಸಾವಿರಾರು ರೈತರಿಗೆ ಫೋನ್ – ಇನ್ ಕಾರ್ಯಕ್ರಮದಲ್ಲಿ ಪರಿಹಾರ ಸೂಚಿಸಿ, ರೈತರ ಪ್ರೀತಿಗೆ ಪಾತ್ರನಾಗಿರುವುದಕ್ಕೆ ನನಗೆ ಬಹಳ ಸಂತೋಷವಿದೆ.

ಈಗಾಗಲೇ ರಾಜ್ಯದಾದ್ಯಂತ ಸಾವಿರಾರು ಕೃಷಿ ಕಾರ್ಯಕ್ರಮಗಳನ್ನು ನೀಡಿರುತ್ತೇನೆ. ಹಳ್ಳಿ–ಹಳ್ಳಿಗಳಿಗೆ ತೆರಳಿ ರೈತರ ತೋಟ ಬದುಗಳ ಮೇಲೆ ಕುಳಿತು ಸಾವಯವ ಕೃಷಿ ಸತ್ಯಗಳನ್ನು ರೈತರಿಗೆ ಅರ್ಥಮಾಡಿಸಿದ್ದೇನೆ. ಸಾವಿರಾರು ರೈತರು ಸಾವಯವ ಕೃಷಿ ಸತ್ಯಗಳನ್ನು ಅರ್ಥಮಾಡಿಕೊಂಡು ಸಾವಯವ ಕೃಷಿಗೆ ಮುಂದಾಗಿದ್ದಾರೆ. ಈ ನಿಟ್ಟಿನಲ್ಲಿ ಸಾವಯವ ಕೃಷಿಯ ಬಗ್ಗೆ ನಿರಂತರವಾಗಿ ರೈತರಿಗೆ ಮಾಹಿತಿ ಬೇಕಾಗಿರುವುದು ತುಂಬಾ ಅನಿವಾರ್ಯ ಎಂದು ಮನಗಂಡು ಪ್ರಾಯೋಗಿಕವಾಗಿ ಈ ಕೃಷಿ ಕ್ರಾಂತಿ ಪತ್ರಿಕೆಯನ್ನು ಹುಟ್ಟುಹಾಕುತ್ತಿದ್ದೇವೆ.

➲ 2ನೇ ಪುಟಕ್ಕೆ



# ಕ್ರಾಂತಿಯ ಹೊಸ್ತಿಲಿನಲ್ಲಿ ಸಾವಯವ ಕೃಷಿ



ಸಮಸ್ತ ರೈತ ಬಾಂಧವರಿಗೆ ನಮಸ್ಕಾರಗಳು

ಕೃಷಿ ಕುಟುಂಬದಲ್ಲಿ ರೈತನ ಮಗನಾಗಿ ಹುಟ್ಟಿ ಬಾಲ್ಯದಿಂದಲೂ ಕೃಷಿಯ ಅನುಭವಗಳನ್ನು ಪಡೆದು ವಿದ್ಯಾರ್ಥಿ ದಿಸೆಯಿಂದಲೇ ಕೃಷಿಯಲ್ಲಿ ವಿಶೇಷ ಆಸಕ್ತಿ ಇಟ್ಟುಕೊಂಡ ನಾನು ಕೃಷಿ ವಿಷಯದಲ್ಲಿಯೇ ಸ್ನಾತಕೋತ್ತರ ಪದವಿ ಪಡೆದುಕೊಂಡು 2 ವರ್ಷಗಳ ಕಾಲ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿದ್ದರು, ನನಗೆ ಆತ್ಮ ತೃಪ್ತಿ ಇರಲಿಲ್ಲ. ಕೊನೆಗೆ ಉಪನ್ಯಾಸಕ ವೃತ್ತಿ ತೊರೆದು ನನ್ನ ಕುಟುಂಬ ಸದಸ್ಯರೊಡನೆ ನಾನು ಕೃಷಿಯಲ್ಲಿ ನನ್ನನ್ನು ತೊಡಗಿಸಿಕೊಂಡೆ 20 ವರ್ಷಗಳ ಕಾಲ ಯಶಸ್ವಿಯಾಗಿ ರೇಷ್ಮೆ ಕೃಷಿಯನ್ನು ಮಾಡಿ ನಮ್ಮ ಭಾಗದ ಅನೇಕ ರೈತರಿಗೆ ವೈಜ್ಞಾನಿಕವಾಗಿ ಹಾಗೂ ಲಾಭದಾಯಕವಾಗಿ ರೇಷ್ಮೆ ಕೃಷಿ ಮಾಡುವ ವಿಧಾನವನ್ನು ಕಲಿಸಿದ ತೃಪ್ತಿ ನನಗಿದೆ.

ಆದರೆ 5 ವರ್ಷಗಳ ಹಿಂದೆಯೇ ನಮ್ಮ ಕೊಳವೆ ಬಾವಿಗಳು ಕೈಕೊಟ್ಟವು. 1500 ಅಡಿ ಕೊರೆದರೂ ನೀರಿಲ್ಲದ ಪರಿಸ್ಥಿತಿ. ಆಗ ಕೃಷಿಯಲ್ಲಿ ಏನನ್ನಾದರೂ ಹೊಸತನ್ನು ಮಾಡಬೇಕು ಎಂದು ದೇಶದಾದ್ಯಂತ ಓಡಾಡಿದೆ ಸತತ 5 ವರ್ಷಗಳ ಅಭ್ಯಾಸದಲ್ಲಿ ನಾನು ಕಂಡುಕೊಂಡ ಉತ್ತರ ರೈತರಾದ ನಮಗೆ ಕೃಷಿಯಲ್ಲಿ ಕನಿಷ್ಠ ಸಾಮಾನ್ಯ ಜ್ಞಾನವಿಲ್ಲ. ಆದ್ದರಿಂದಲೇ ಇಂದು ಇಡೀ ರೈತ ಸಮುದಾಯ ಸಂಕಷ್ಟದಲ್ಲಿದೆ ಎಂದು ಅರಿವಾಯಿತು.



ಕೃಷಿಕರಾದ ನಮಗೂ ಮಣ್ಣಿಗೂ ಇರುವಷ್ಟು ಸಂಬಂಧ ಬೇರೆ ಯಾರಿಗೂ ಇರುವುದಿಲ್ಲ. ಮಣ್ಣನ್ನು ಮುಟ್ಟುವವರು ನಾವು, ಮಣ್ಣಿನೊಂದಿಗೆ ಕೆಲಸ ಮಾಡುವವರು ನಾವು, ಪ್ರತಿದಿನ ಮೈಮೇಲೆ ಮಣ್ಣನ್ನು ಸುರಿದುಕೊಂಡು ಮಣ್ಣಿನೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿರುವ ನಮಗೆ ಮಣ್ಣಿನ ಗುಣಧರ್ಮಗಳು ತಿಳಿದಿರಬೇಕಲ್ಲವೇ? ಮಣ್ಣು ಒಂದು ಜೀವಂತ ವಸ್ತುವೇ? ಅಥವಾ ನಿರ್ಜೀವ ವಸ್ತುವೇ? ಎಂಬ ಸ್ಪಷ್ಟತೆ ನಮಗೆ ಇರಬೇಕಲ್ಲವೇ. ನಾನು ರಾಜ್ಯದಾದ್ಯಂತ ಸಾವಿರಾರು ರೈತರನ್ನು ಭೇಟಿ ಮಾಡಿ ಕೇಳಿದ ಈ ಪ್ರಶ್ನೆಗೆ ರೈತರಿಂದ ಸ್ಪಷ್ಟ ಉತ್ತರ ಸಿಗದಿದ್ದಾಗ. ನನಗೆ ಬಹಳ ಆಶ್ಚರ್ಯವಾಯಿತು. ಮಣ್ಣು ಒಂದು ಜೀವಂತ ವಸ್ತು ಮಣ್ಣಿನಲ್ಲಿ ಕಣ್ಣಿಗೆ ಕಾಣದ ಕೋಟ್ಯಾನುಕೋಟಿ ಸೂಕ್ಷ್ಮಾಣು ಜೀವಿಗಳಿವೆ. ಒಂದು ಗ್ರಾಂ ಆರೋಗ್ಯಪೂರ್ಣ ಮಣ್ಣಿನಲ್ಲಿ 2 ಕೋಟಿ 90 ಲಕ್ಷ ಸೂಕ್ಷ್ಮಾಣು ಜೀವಿಗಳಿರಬೇಕು. ನಾವು ಉಸಿರಾಡಲು ಗಾಳಿ ಬೇಕು, ಗಾಳಿ ಕಣ್ಣಿಗೆ ಕಾಣಿಸುವುದಿಲ್ಲ. ನಮಗೆ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ ಮಣ್ಣಿಗೆ ಸೂಕ್ಷ್ಮಾಣು ಜೀವಿಗಳು ಅಷ್ಟೇ ಮುಖ್ಯ ಎಂಬ ಸತ್ಯವನ್ನು ರೈತಬಾಂಧವರು ಅರ್ಥಮಾಡಿಕೊಳ್ಳಬೇಕು.

ಕೃಷಿಯಲ್ಲಿ ಸತತ ರಾಸಾಯನಿಕಗಳನ್ನು ಬಳಕೆ ಮಾಡುವುದನ್ನು ಕಲಿತುಕೊಂಡ ನಾವು ಸುಮಾರು 30 – 40 ವರ್ಷಗಳಿಂದ ಸತತವಾಗಿ ಮಣ್ಣು ಜೀವಿಗಳನ್ನು ನಾಶಮಾಡುತ್ತಾ ಬಂದಿದ್ದೇವೆ.

➲ 2ನೇ ಪುಟಕ್ಕೆ



ಕಲಿಯಿರಿ ಕಲಿಸಿರಿ

## ಕಬ್ಬು ಮತ್ತು ಸೂರ್ಯ

ಕಬ್ಬು ಉಷ್ಣವಲಯದ ಬೆಳೆ, ಸೂರ್ಯನ ಬೆಳಕನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತದೆ. ಇದರಿಂದ ಕಬ್ಬಿನ ಇಳುವರಿ ಹೆಚ್ಚುತ್ತದೆ. ಇದು ಹುಲುಸಾಗಿ ಬೆಳೆಯಲು 25 ರಿಂದ 30ಡಿಗ್ರಿ ಸೆ. ಉಷ್ಣಾಂಶ ಬೇಕಾಗುತ್ತದೆ. ಇದಕ್ಕಿಂತ ಉಷ್ಣತೆ ಕಡಿಮೆಯಾದರೆ, ಬೆಳವಣಿಗೆ ಕುಗ್ಗಿ ಸಕ್ಕರೆ ಅಂಶ ಕಡಿಮೆಯಾಗುವ ಸಂಭವವಿರುತ್ತದೆ. ಬೇಸಿಗೆಯಲ್ಲಿ ಬೆಳೆದ ಕಬ್ಬು ಹೆಚ್ಚಿನ ಇಳುವರಿ ಕೊಡಬಲ್ಲದು. ದಿನದ ಬೆಳಕಿನ ಕಾಲಾವಧಿ ಕಡಿಮೆಯಾದರೆ ಕಬ್ಬಿನ ಬೆಳವಣಿಗೆ ಕುಂಠಿತವಾಗಿ ಸೂಲಂಗಿ ಬಿಡಲು ಪ್ರಾರಂಭಿಸುತ್ತದೆ. ಇದರಿಂದ ಕಬ್ಬಿನ ಇಳುವರಿ ಮತ್ತು ಸಕ್ಕರೆ ಅಂಶ ಗಣನೀಯವಾಗಿ ಕಡಿಮೆಯಾಗುತ್ತದೆ. ಕಬ್ಬಿಗೆ ಸಾಕಷ್ಟು ಗಾಳಿ, ಬೆಳಕು ಸಿಗುವ ಅಂತರದಲ್ಲಿ ಕಬ್ಬು ನಾಟಿ ಮಾಡಬೇಕು, ಸಾಲುಗಳ ನಡುವಿನ ಅಂತರ ಕನಿಷ್ಠ 5–6 ಅಡಿ ಇದ್ದರೆ ಬಹಳ ಉತ್ತಮ.



## ಆಶಯ

➲ 1ನೇ ಪುಟದಿಂದ...

ಈ ಪತ್ರಿಕೆಯ ವಿಶೇಷವೇನೆಂದರೆ, ರೈತರಿಂದ ರೈತರಿಗೆ ಶಿಕ್ಷಣ, ರೈತರ ಅನುಭವದ ಜೊತೆಗೆ ಸಾವಯವ ಕೃಷಿ ಮೂಲತತ್ವಗಳು, ಅತ್ಯಾಧುನಿಕ ಜೈವಿಕ ತಂತ್ರಜ್ಞಾನ, ಜೈವಿಕ ಪರಿಸರ, ಹೈಬ್ರೀಡ್ ತಳಿಗಳೊಂದಿಗೆ ರಾಸಾಯನಿಕ ಕೃಷಿ, ಅಂತರಬೆಳೆ, ಬೆಳೆಪರಿವರ್ತನೆ, ಹಸಿರು ಗೊಬ್ಬರಗಳು, ಸುತ್ತಂಚಿನ ಬೆಳೆ, ಸಾಂಪ್ರದಾಯಿಕ ಕೃಷಿ ತಂತ್ರಗಳು, ಸಾವಯವ ಕ್ರಿಮಿನಿಯಂತ್ರಕಗಳ ಮಾಹಿತಿ. ಸಾವಯವ ಉತ್ಪನ್ನಗಳ ಮಾರುಕಟ್ಟೆ ಹೀಗೆ ಸಾವಯವ ಕೃಷಿಗೆ ಸಂಬಂಧಿಸಿದ ಲೇಖನಗಳು ರೈತರ ಅನುಭವಗಳಲ್ಲಿ ಮೂಡಿ ಬರಲಿ. ರೈತರಿಂದ ರೈತರಿಗೆ ಶಿಕ್ಷಣ ಸಿಗಲಿ ಎಂಬುದು ನಮ್ಮ ಆಶಯವಾಗಿದೆ.

## ನಮ್ಮ ಜಮೀನು ಎರೆಹುಳುವಿನ ತೊಟ್ಟಿಲಾಗಲಿ

ರೈತನ ಮಿತ್ರ ನಿಸರ್ಗದ ನೇಗಿಲು ಎರೆಹುಳು ನಮ್ಮ ಜಮೀನಿನಲ್ಲಿನ ತ್ಯಾಜ್ಯಗಳನ್ನು ತಿಂದು ಪ್ರತಿದಿನ ತನ್ನ ಗಾತ್ರದ 5 ಪಟ್ಟು ಹಿಕ್ಕೆಗಳನ್ನು ಹಾಕಿ ಮಣ್ಣನ್ನು ಫಲವತ್ತುಗೊಳಿಸುತ್ತದೆ. ಎರೆಹುಳು ಗೊಬ್ಬರದಲ್ಲಿ ಎಲ್ಲಾ ಬಗೆಯ ಪೋಷಕಾಂಶಗಳು ಸಸ್ಯಕ್ಕೆ ಸಿಗುತ್ತವೆ ಹಾಗೂ ಭೂಮಿಯ ಮೇಲ್ಪದರದಿಂದ ಸುಮಾರು 7 ರಿಂದ 8 ಅಡಿ ಮೇಲಿಂದ ಕೆಳಕ್ಕೆ ಕೆಳಗಿನಿಂದ ಮೇಲಕ್ಕೆ ಚಲಿಸಿ ಮಣ್ಣಿನಲ್ಲಿ ಗಾಳಿಯಾಡಲು ಅನುವು ಮಾಡಿಕೊಟ್ಟು ಮಣ್ಣು ಜೀವಿಗಳ ಅಭಿವೃದ್ಧಿಗೆ ಸಹಕರಿಸುತ್ತದೆ. ಎರೆಹುಳುಗಳು ಮಣ್ಣನ್ನು ಮೃದು ಮಾಡುವುದರಿಂದ ಮಣ್ಣು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ.

# ಸಾವಯವ ಕೃಷಿ

➲ 1ನೇ ಪುಟದಿಂದ...

ಜೀವಂತ ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳ ಜೊತೆಗೆ ಕಣ್ಣಿಗೆ ಕಾಣುವ ರೈತನ ಮಿತ್ರ ಎರೆಹುಳು ಇರುತ್ತದೆ. ಪ್ರಾಮಾಣಿಕವಾಗಿ ಹೇಳಿ ನಿಮ್ಮ ಜಮೀನಿನಲ್ಲಿ ರೈತನಮಿತ್ರ ಎರೆಹುಳುಗಳು ತುಂಬಿವೆಯೇ? ಅವು ಕ್ರಿಯಾಶೀಲವಾಗಿ ನಿಮಗೆ ಕೃಷಿಯಲ್ಲಿ ಉತ್ಪಾದನೆ ಹೆಚ್ಚಿಸಿವೆಯೇ? ಸತತ ರಾಸಾಯನಿಕಗಳ ಬಳಕೆಯಿಂದ ಮಣ್ಣು ಜೀವಿಗಳು ನಾಶವಾಗಿ ನಾವು ರಾಸಾಯನಿಕ ಕೃತಕ ಗೊಬ್ಬರಗಳನ್ನು ಬಳಸಿ, ಕೃತಕ ಬೆಳೆಗಳನ್ನು ಪಡೆಯುತ್ತಿದ್ದೇವೆ. ದಿನೇ ದಿನೇ ಭೂಮಿ ಬರಡಾಗುತ್ತಿದ್ದು ಇಳುವರಿ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಕಬ್ಬಿನ ಇಳುವರಿ ಎಕರೆಗೆ 30–40 ಟನ್‌ಗೆ ಕುಸಿದಿರುವುದೇ ನಿಮ್ಮ ಮುಂದೆ ಇರುವ ಜೀವಂತ ಸಾಕ್ಷಿ!!

ರಾಸಾಯನಿಕ ಕೃಷಿಯಲ್ಲಿ ನಾವು ಸಾಧಿಸಿದ್ದಾದರೂ ಏನು? ನಮ್ಮ ಹಿರಿಯರು 90ರಿಂದ 100 ವರ್ಷ ಬದುಕುತ್ತಿದ್ದರು. ನಾವು 40 ವರ್ಷ ಆಯಸ್ಸು ಕಳೆದುಕೊಂಡು 50 ರಿಂದ 60ಕ್ಕೆ ನಮ್ಮ ಸರಾಸರಿ ಆಯಸ್ಸು ಬಂದು ನಿಂತಿದೆ. ನಮ್ಮ ಪರಿಸ್ಥಿತಿ ಹೀಗಾದರೆ ಇನ್ನೂ ನಮ್ಮ ಮಕ್ಕಳ ಮುಂದಿನ ಪೀಳಿಗೆಯ ಪರಿಸ್ಥಿತಿ ಏನು? ಒಮ್ಮೆ ಯೋಚಿಸಿ. ಮಣ್ಣು ರೈತನ ಹೊನ್ನು, ಮಣ್ಣೆ ಸಕಲ ಜೀವಿಗಳಿಗೆ ಆಧಾರ ಅಂತಹ ಪವಿತ್ರ ಮಣ್ಣನ್ನು ಜೀವಂತವಾಗಿರಿಸುವುದು ರೈತರಾದ ನಮ್ಮ ಕರ್ತವ್ಯವಲ್ಲವೇ?

ಹತ್ತಾರು ವರ್ಷಗಳಿಂದ ಕೃಷಿಯನ್ನು ಮಾಡಿಕೊಂಡು ಬಂದಿರುವ ನಮಗೆ ಒಂದು ಸಸ್ಯ ಬೆಳೆಯಲು ಏನು ಬೇಕು? ಅದು ಎಲ್ಲಿ ಸಿಗುತ್ತದೆ? ಸಾವಿರಾರು ವರ್ಷಗಳಿಂದ ಪ್ರಕೃತಿ ಅದನ್ನು ಹೇಗೆ ನಿರ್ವಹಿಸುತ್ತಿದೆ ಎಂಬ ಸತ್ಯ ತಿಳಿದಿರಬೇಕಲ್ಲವೇ? ಹಾಗೂ ಸಸ್ಯಕ್ಕೆ ಯಾವ ಯಾವ ಪೋಷಕಾಂಶಗಳು ಬೇಕು? ಮತ್ತು ಯಾವ ಹಂತದಲ್ಲಿ ಬೇಕು? ಎಂಬುದು ವೈಜ್ಞಾನಿಕವಾಗಿ ತಿಳಿದಿದ್ದಾಗ ಮಾತ್ರ ಕೃಷಿಯಲ್ಲಿ ಕೃಷಿಕ ಯಶಸ್ವಿಯಾಗಬಹುದು.

ನೋಡಿ ಒಂದು ಸಸ್ಯಕ್ಕೆ ಇಂಗಾಲ 44% ಆಮ್ಲಜನಕ 44% ಜಲಜನಕ 6% ಉಳಿದ ಎಲ್ಲ ಪೋಷಕಾಂಶಗಳು 6%ರಷ್ಟು ಬೇಕಾಗುತ್ತದೆ. ಈ 6% ಪೋಷಕಾಂಶಗಳನ್ನು ಮುಖ್ಯ ಪೋಷಕಾಂಶಗಳೂ ಮತ್ತು ಲಘು ಪೋಷಕಾಂಶಗಳಾಗಿ ವಿಂಗಡಿಸಲಾಗಿದೆ. ಮುಖ್ಯ ಪೋಷಕಾಂಶಗಳಲ್ಲಿ ಮೂರು ಸಾರಜನಕ, ರಂಜಕ, ಪೊಟ್ಯಾಶ್ (N.P.K.)ಈ ನಿಟ್ಟಿನಲ್ಲಿ ರೈತರು ತಿಳಿದಿರಲೇಬೇಕಾದ ಜ್ಞಾನವೇನೆಂದರೆ, ಸಸ್ಯಕ್ಕೆ ಪ್ರಾರಂಭದಲ್ಲಿ ಯಾವ ಪೋಷಕಾಂಶಬೇಕು? ಅದು ಎಲ್ಲಿ ಸಿಗುತ್ತದೆ? ಸಸ್ಯಕ್ಕೆ ಪ್ರಾರಂಭದಲ್ಲಿ ಸಾರಜನಕ ಬೇಕು. ಅದು ಈಗ ನಾವು ಅಂಗಡಿಯಿಂದ ತಂದು ಹಾಕುತ್ತಿದ್ದೇವೆ. ಆದರೆ ಸಾವಿರಾರು ವರ್ಷಗಳಿಂದ ಸಸ್ಯ ಸಾರಜನಕ ಹೇಗೆ ಪಡೆದುಕೊಳ್ಳುತ್ತಿತ್ತು ಎಂಬ ಸತ್ಯವನ್ನು ರೈತರು ಅರಿಯಬೇಕಾಗಿದೆ. ನಾವು ಕೃತಕವಾಗಿ ತಯಾರಿಸಿರುವುದು ರಾಸಾಯನಿಕ ಸಾರಜನಕ, ಆದರೆ ವಾತಾವರಣದಲ್ಲಿ 78.6ರಷ್ಟು ಸಾವಯವ ಸಾರಜನಕವಿದೆ. ಅದು ಅನಿಲ ರೂಪದಲ್ಲಿ ಇದೆ. ಆದರೆ! ಆ ಸಾರಜನಕವನ್ನು ನಮ್ಮ ಸಸ್ಯ ನೇರವಾಗಿ ಪಡೆದುಕೊಳ್ಳಲು ಆಗುವುದಿಲ್ಲ. ಯಾವ ಮಣ್ಣಿನಲ್ಲಿ ಸಾರಜನಕ ಸ್ಥಿರಿಕರಣ ಮಾಡುವ ಸೂಕ್ಷ್ಮಾಣು ಜೀವಿಗಳಿರುತ್ತದೆಯೋ ಅಲ್ಲಿ ಸಸ್ಯಗಳಿಗೆ ವಿಪುಲವಾಗಿ ಸಾವಯವ ಸಾರಜನಕ ಸಿಗುತ್ತದೆ. ಸಸ್ಯಗಳಿಗೆ ಪ್ರಾರಂಭದ ಅವಧಿಯಲ್ಲಿ ಸಾರಜನಕ ಹೆಚ್ಚಿಗೆ ಬೇಕಾಗುತ್ತದೆ.

ಸಸ್ಯಕ್ಕೆ ಮಧ್ಯಂತರ ಕಾಲದಲ್ಲಿ ರಂಜಕ ಹೆಚ್ಚಿಗೆ ಬೇಕಾಗುತ್ತದೆ. ಕಾಂಡದ ಅಭಿವೃದ್ಧಿ ರೆಂಬೆ ಕೊಂಬೆಗಳ ಅಭಿವೃದ್ಧಿಗೆ, ಬೇರಿನ ಬೆಳವಣಿಗೆ, ಎಲೆಗಳ ಅಭಿವೃದ್ಧಿಗೆ ಹಾಗೂ ಉತ್ತಮ ರೋಗ ನಿರೋಧ ಶಕ್ತಿ ಸಸ್ಯ ಪಡೆಯಲು ರಂಜಕ ಬೇಕಾಗುತ್ತದೆ. ರಾಸಾಯನಿಕ ರಂಜಕವನ್ನು ನಾವು ಯಥಾಪ್ರಕಾರ ಅಂಗಡಿಯಿಂದ ತಂದು ಹಾಕುತ್ತೇವೆ. ಆದರೆ ಸಾವಯವ ವಿಜ್ಞಾನ ಹೇಳುವಂತೆ ಸಾವಯವ ರಂಜಕ ಮಣ್ಣಿನಲ್ಲಿ ಹಾಗೂ ಕಸ ಕಡ್ಡಿ ಎಲ್ಲ ಜೈವಿಕ ತ್ಯಾಜ್ಯಗಳಲ್ಲಿ ಟನ್‌ಗಟ್ಟಲೇ ರಂಜಕವಿದೆ. ಆದರೆ ಅದು ಕಣಗಳ ರೂಪದಲ್ಲಿ ಇದೆ. ಯಾವ ಮಣ್ಣಿನಲ್ಲಿ ರಂಜಕ ಕರಗಿಸಿಕೊಡುವ ಸೂಕ್ಷ್ಮಾಣು ಜೀವಿಗಳಿರುತ್ತವೆಯೋ (P.S.B.) ಅಲ್ಲಿ ಸಸ್ಯಕ್ಕೆ ವಿಫುಲವಾಗಿ ರಂಜಕ




ಸಸ್ಯಗಳಿಗೆ ಪ್ರಾಕೃತಿಕವಾಗಿ N.P.K ಹಾಗೂ ಎಲ್ಲಾ ಪೋಷಕಾಂಶಗಳನ್ನು ಪಡೆಯುತ್ತವೆ

ಸಿಗುತ್ತವೆ ಎಂಬ ಅಂಶವನ್ನೂ ರೈತರು ಮನಗಂಡು ಸೂಕ್ಷ್ಮಾಣುಜೀವಿಗಳ ಮಹತ್ವವನ್ನು ತಿಳಿಯಬೇಕಿದೆ.

ಸಸ್ಯದ ಮೂರನೇ ಹಂತ ಗರ್ಭಿಣಿ ಹಂತ. ಫಸಲನ್ನು ಕೂಡುವ ಹಂತ, ಉತ್ತಮ ಹೂ. ಹಣ್ಣು, ಕಾಯಿ, ಇಳುವರಿ, ರುಚಿ, ಗಾತ್ರ, ವಾಸನೆ ಇವೆಲ್ಲ ಉತ್ಕೃಷ್ಟವಾಗಿರಬೇಕಾದರೆ, ಪೊಟ್ಯಾಶ್ ಬೇಕು. ನಾವು ರಾಸಾಯನಿಕ ಪೊಟ್ಯಾಶ್ ಅನ್ನು ಅಂಗಡಿಯಿಂದ ತಂದು ಹಾಕುತ್ತಿದ್ದೇವೆ. ಸಾವಯವ ವಿಜ್ಞಾನ ಹೇಳುವಂತೆ ನಮ್ಮ ಮಣ್ಣಿನಲ್ಲಿ ಹಾಗೂ ಎಲ್ಲಾ ಜೈವಿಕ ತ್ಯಾಜ್ಯಗಳಲ್ಲಿ ಟನ್‌ಗಟ್ಟಲೆ ಸಾವಯವ ಪೊಟ್ಯಾಶ್ ಇದೆ. ಆದರೆ ಅದು ಕಣಗಳ ರೂಪದಲ್ಲಿ ಇದೆ. ಅದನ್ನು ಕರಗಿಸಿ ಕೊಡುವ ಸೂಕ್ಷ್ಮಾಣು ಜೀವಿಗಳು ಯಾವ ಮಣ್ಣಿನಲ್ಲಿ ಇರುತ್ತವೆಯೋ, ಅಲ್ಲಿ ವಿಪುಲವಾಗಿ ಸಸ್ಯಕ್ಕೆ ಪೊಟ್ಯಾಶ್ ಸಿಗುತ್ತದೆ ಎಂಬ ಅಂಶವನ್ನು ರೈತರು ಮನಗಂಡು ಮಣ್ಣಿನಲ್ಲಿ ಜೈವಿಕ ಪರಿಸರದ ಕ್ರಿಯಾಶೀಲತೆ ಹೆಚ್ಚಿಸಬೇಕು.

ಇನ್ನೂ ಇತ್ತೀಚೆಗೆ ಜೈವಿಕ ಪರಿಸರವನ್ನು ಅತಿವೇಗವಾಗಿ ಹಾಳು ಮಾಡುತ್ತಿರುವುದು ರಾಸಾಯನಿಕ ಲಘು ಪೋಷಕಾಂಶಗಳು. ಈ ಬಗ್ಗೆ ರೈತರು ಸಾಕಷ್ಟು ಗೊಂದಲದಲ್ಲಿದ್ದಾರೆ. ಅಗತ್ಯಕ್ಕಿಂತ ಹೆಚ್ಚಿಗೆ ರಾಸಾಯನಿಕ ಲಘು ಪೋಷಕಾಂಶಗಳನ್ನು ನೀಡುತ್ತಿರುವುದರಿಂದ ಮಣ್ಣು ವಿಷವಾಗುತ್ತಿದೆ. ಮಣ್ಣು ಸಂಪೂರ್ಣವಾಗಿ ಫಲವತ್ತತೆ ಕಳೆದುಕೊಂಡು ಬೆಳೆ ಬೆಳೆಯಲಾಗದ ಬರಡು ಭೂಮಿ ನಿರ್ಮಾಣವಾಗುತ್ತಿರುವುದು ಬಹಳ ಆತಂಕದ ವಿಷಯವಾಗಿದೆ.

ಸಾವಯವ ವಿಜ್ಞಾನ ಹೇಳುವಂತೆ ಸಸ್ಯಕ್ಕೆ ಲಘು ಪೋಷಕಾಂಶಗಳು ಸಿಗಬೇಕಾಗಿರುವುದು ಹೊರಗಿನಿಂದ ನೀಡುವ ಕೃತಕ ಖನಿಜಗಳ ರೂಪಾಂತರದಿಂದಲ್ಲ, ಪ್ರಾಕೃತಿಕವಾಗಿ ಮಣ್ಣಿನ ಜೈವಿಕ ಪರಿಸರದಲ್ಲಿ ನಡೆಯುವ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಗಳಿಂದ ಯಾವ ಮಣ್ಣಿನಲ್ಲಿ ಉತ್ಕೃಷ್ಟವಾದ ಹ್ಯೂಮಸ್ ರಚನೆಯಾಗುತ್ತದೆಯೋ ಅಲ್ಲಿ ಸಸ್ಯಕ್ಕೆ ಎಲ್ಲ ರೀತಿಯ ಪೋಷಕಾಂಶಗಳು ಸಿಗುತ್ತವೆ. ಅಲ್ಲದೆ ರೈತನ ಮಿತ್ರ ಎರೆಹುಳು ಮಣ್ಣು ಹಾಗೂ ಜೈವಿಕ ತ್ಯಾಜ್ಯಗಳನ್ನು ತಿಂದು ಹಿಕ್ಕೆ ಹಾಕುತ್ತವೆ. ಆ ಹಿಕ್ಕೆಯಲ್ಲಿ ಸಸ್ಯಕ್ಕೆ ಬೇಕಾದ ಎಲ್ಲಾ ರೀತಿಯ ಲಘು ಪೋಷಕಾಂಶಗಳು ಸಿಗುತ್ತವೆ ಹಾಗೂ ಎರೆಹುಳುವಿನ ದೇಹದ ಹೊರಭಾಗಕ್ಕೆ ಒಂದು ಅಂಟು ಸ್ರವಿಸುತ್ತದೆ. ಆ ಅಂಟಿನಲ್ಲಿ ವಿಪುಲವಾದ ಲಘು ಪೋಷಕಾಂಶಗಳಿವೆ ಎಂಬ ಸತ್ಯವನ್ನು ಮನಗಂಡು ಮಣ್ಣಿನ ಜೈವಿಕ ಪರಿಸರ ಉಳಿಸಬೇಕು.

ಈಗ ಜೈವಿಕ ಪರಿಸರ ಉಳಿಸಿಕೊಳ್ಳಲು ನಮಗಿರುವ ಒಂದೇ ಪರಿಹಾರ ಸಾವಯವ ಕೃಷಿ. ಆದರೆ, ನಾನು ದೇಶದಾದ್ಯಂತ ಅನೇಕ ಸಾವಯವ ಕೃಷಿಕರನ್ನು ಬೇಟಿಯಾಗಿ ಮಾತನಾಡಿದಾಗ ಎಲ್ಲ ಸಾವಯವ ಕೃಷಿಕರದ್ದು ಒಂದೇ ಸಮಸ್ಯೆ? ಸಾವಯವ ಕೃಷಿಯನ್ನು ನಿರಂತರವಾಗಿ

➲ 3ನೇ ಪುಟಕ್ಕೆ

### ಸಸ್ಯಗಳಿಗೆ ಸಾರಜನಕ ಒದಗಿಸಿಕೊಡುವ ಸೂಕ್ಷ್ಮಾಣುಜೀವಿಗಳು

ಜೈವಿಕವಾಗಿ ಸಾರಜನಕವನ್ನು ಹಿಡಿದಿಡುವ ಸೂಕ್ಷ್ಮಜೀವಿಗಳು ವಾತಾವರಣದಲ್ಲಿನ ನೈಟ್ರಸ್‌ನ್ನು ಅಮೋನಿಯಾ ರೂಪಕ್ಕೆ ಮಾರ್ಪಡಿಸುತ್ತದೆ. ದ್ವಿದಳ ಧಾನ್ಯಗಳ ಬೇರುಗಳಲ್ಲಿನ ಗಂಟುಗಳಲ್ಲಿ ರೈಜೋಬಿಯಂ ಸೂಕ್ಷ್ಮಾಣುಜೀವಿಗಳು ವಾತಾವರಣದಿಂದ ಸಾರಜನಕ ಹೀರಿ ಸಸ್ಯಗಳಿಗೆ ಒದಗಿಸಿ ಮಣ್ಣಿನಲ್ಲಿ ಸಾರಜನಕ ಸ್ಥಿರೀಕರಣವನ್ನು ಮಾಡುತ್ತವೆ. ರೈಜೋಬಿಯಂ, ಅಜಟೋಬ್ಯಾಕ್ಟರ್ ಅಜೋಸ್ಪಿರಿಲಂ, ಬ್ರಾಡಿರೈಜೋಬಿಯಂ, ಅಜೋಲ್ಲ ನೀಲಿ ಹಸಿರು ಪಾಚಿ ವಾತಾವರಣದ ಸಾರಜನಕವನ್ನು ಸಸ್ಯಗಳಿಗೆ ಒದಗಿಸಿಕೊಡುವ ಮುಖ್ಯ ಸೂಕ್ಷ್ಮಾಣುಜೀವಿಗಳು.



### ಸಾವಯವ ಸಾರಜನಕ

ವಾತಾವರಣದಲ್ಲಿ ಶೇಕಡಾ 78.6ರಷ್ಟು ಸಾರಜನಕವಿದೆ. ಮುಂಗಾರು ಮಳೆ ಸಂದರ್ಭದಲ್ಲಿ ಸಿಡಿಲು ಉಂಟಾದಾಗ ಸಾರಜನಕ ವಿಭಜನೆ ಹೊಂದಿ ಮಳೆ ನೀರಿನ ಮೂಲಕ ಸರಿ ಸುಮಾರು ಶೇ 25% ರಷ್ಟು ಪ್ರಮಾಣದಲ್ಲಿ ಸಸ್ಯಗಳಿಗೆ ಸಾರಜನಕ ದೊರೆಯುತ್ತದೆ. ಆದ್ದರಿಂದಲೇ ಮುಂಗಾರು ಮಳೆಯಾದ ಕೇವಲ ಮೂರುಗಂಟೆಗಳ ಅವಧಿಯಲ್ಲಿ ಸಸ್ಯಗಳು ಬಹಳ ತಂಪಾಗಿ ಕಂಗೊಳಿಸುತ್ತವೆ. ಈ ಸಮಯದಲ್ಲಿ ಪ್ರಕೃತಿ ಹಸಿರುಮಯವಾಗಿದ್ದು ನಗುನಗುತ್ತಾ ಇರುತ್ತವೆ.



# ಸಾವಯವ ಕೃಷಿ

2ನೇ ಪುಟದಿಂದ...

2-3 ವರ್ಷಗಳ ಕಾಲ ಮಾಡಿದಾಗ 4 ರಿಂದ 5ನೇ ವರ್ಷದಲ್ಲಿ ಉತ್ತಮ ಇಳುವರಿ ಸಿಗುತ್ತದೆ. ಅಲ್ಲಿಯ ತನಕ ಕಾಯುವ ವ್ಯವದಾನ ಹಾಗೂ ಶಕ್ತಿ ರೈತ ಸಮೂಹಕ್ಕೆ ಇಲ್ಲ ಎಂಬ ಅಂಶ ನನಗೆ ಅರ್ಥವಾಯಿತು. ಈ ನಿಟ್ಟಿನಲ್ಲಿ ನಾನು ಸುಮಾರು 5 ವರ್ಷಗಳ ಕಾಲ ಅಭ್ಯಾಸ ನಡೆಸಿ, ನಾನು ಮತ್ತು ನನ್ನ ಸಂಗಡಿಗರ ಸಂಶೋಧನಾ ತಂಡ ಡಾ.ಸಾಯಿಲ್ ಎಂಬ ದ್ರವರೂಪದ ಸಾವಯವ ಗೊಬ್ಬರ ಅಭಿವೃದ್ಧಿಪಡಿಸಿದೆವು. ಮೊದಲನೇ ಬೆಳೆಯಿಂದಲೇ ಯಶಸ್ವಿ ಸಾವಯವ ಕೃಷಿ Dr. Soilನಿಂದ ಸಾಧ್ಯವಾಗಿದೆ. ಸುಮಾರು 20 ತಿಂಗಳಿನಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲ ತರಹದ ಬೆಳೆಗಳ ಮೇಲೆ ರೈತರಿಂದ ಸಾವಿರಾರು ಪ್ರಾತ್ಯಕ್ಷಿಕೆಗಳನ್ನು ಮಾಡಿ ಫಲಿತಾಂಶಗಳನ್ನು ಅವಲೋಕಿಸಿದಾಗ ನಿಜಕ್ಕೂ ಆಶ್ಚರ್ಯವಾಗುತ್ತಿದೆ. ಇದನ್ನು ಬಳಸಿದ ರೈತರು ಆತ್ಮವಿಶ್ವಾಸದಿಂದ ಕೃಷಿ ಮಾಡುತ್ತಿದ್ದಾರೆ. ಸಾವಿರಾರು ರೈತರ ಮುಖದಲ್ಲಿ ಸಂತಸದ ನಗು ಕಾಣುತ್ತಿದೆ. ಇದು ನಾನು ಹೇಳುವ ಮಾತಲ್ಲ. ಈ ಸಂಚಿಕೆಯಲ್ಲಿ ರೈತರೇ ನೇರವಾಗಿ ತಮ್ಮ ಮನದಾಳದ ಮಾತುಗಳನ್ನು Dr. Soilನ ಮಹತ್ವವನ್ನು ತಿಳಿಸಿದ್ದಾರೆ. ಪ್ರೀತಿಯ ರೈತಬಾಂಧವರೇ ಇಡೀ ಸಮಾಜಕ್ಕೆ ಅನ್ನ ನೀಡುವವರು. ನಾವು ವಿಷಮುಕ್ತ ಆಹಾರ ಬೆಳೆಯಲು ಪಣತೊಡೋಣ. ವಿಷಮುಕ್ತ ಮಣ್ಣು, ವಿಷಮುಕ್ತ ನೀರು, ವಿಷಮುಕ್ತ ಆಹಾರದ ಉತ್ಪಾದನೆ ನಮ್ಮಿಂದ ಮಾತ್ರ ಸಾಧ್ಯವಿದೆ. ಕೃಷ್ಣಾ, ಕಾವೇರಿ ಪಾತ್ರದ ವ್ಯವಸಾಯಕ್ಕೆ ಸರಿಸುಮಾರು 2000 ವರ್ಷಗಳ ಇತಿಹಾಸವಿದೆ. ನಮ್ಮ ಹಿರಿಯರು ಎಂದೂ ಮಣ್ಣಿನ ಜೈವಿಕ ಪರಿಸರವನ್ನು ನಾಶಮಾಡಿದವರಲ್ಲ ಎಂಬುದನ್ನು ಅರಿತು, ನಾವು ಅತ್ಯಾಧುನಿಕ ತಂತ್ರಜ್ಞಾನದಿಂದ ತಯಾರಿಸಿರುವ ಪರಿಸರ ಸ್ನೇಹಿ Dr. Soilನ ಸದುಪಯೋಗ ಪಡೆದುಕೊಂಡು Dr. Soil ಸಾವಯವ ಕೃಷಿಗೆ ಮುಂದಾಗಿ, ಹೊಸ ಕೃಷಿ ಕ್ರಾಂತಿಗೆ ಕರೆ ನೀಡಬೇಕೆಂದು ತಮ್ಮಲ್ಲಿ ಹೃದಯಪೂರ್ವಕವಾಗಿ ವಿನಂತಿಸುತ್ತೇನೆ.

## ಸಾವಯವ ರಂಜಕ ಸಸ್ಯಗಳಿಗೆ ಹೇಗೆ ದೊರೆಯುತ್ತದೆ?



ಸಸ್ಯಗಳಿಗೆ ರಂಜಕವನ್ನು ಕರಗಿಸಿಕೊಡುವ ಮತ್ತು ಸಿಂಚನೆ ಮಾಡುವ ಸೂಕ್ಷ್ಮ ಜೀವಿಗಳೇ ಪಾಸ್ಪರಸ್ ಸಾಲ್ಯೂಬಲ್ ಬ್ಯಾಕ್ಟೀರಿಯಗಳು (ಪಿ.ಎಸ್.ಬಿ) ಈ ಗುಂಪಿನಲ್ಲಿ ಸುಡೊಮಾನಸ್ ಸ್ಟ್ರೀಯೇಟ, ಪ್ಲೋರೆಸ್ಸೆನ್ಸ್, ಬ್ಯಾಸಿಲ್ಲಸ್ ಪಾಲಿಮಿಕ್ಸ್ ಅಣುಜೀವಿ ಪ್ರಬೇಧಗಳು, ಆಸ್ಪರ್ಜಿಲ್ಲಸ್ಅವಮೋರಿ ಆಸ್ಪರ್ಜಿಲ್ಲಸ್ ನೈಜರ್, ಪೆನಿಸಿಲ್ಲಿಯಂ ಶಿಲೀಂದ್ರ ಪ್ರಬೇಧಗಳು ಆರ್ಬ್ಯಸ್ಕುಲಾರ್ ಮೈಕೊರೈಜಾ ಮುಂತಾದವು, ಇವು ಏಕಕಣ, ದ್ವಿಕಣ, ತ್ರಿಕಣ, ಚತುರ್ಕಣ ಹಾಗೂ ಸಿಲಿಕೇಟ್ ರೂಪದಲ್ಲಿ ಇರುವ ಪೋಷಕಾಂಶಗಳನ್ನು ಸೂಕ್ಷ್ಮಾಣು ಜೀವಿಗಳು ಕರಗಿಸಿ ಸಸ್ಯಕ್ಕೆ ಒದಗಿಸಿಕೊಡುತ್ತವೆ.



## ಪೊಟ್ಯಾಶಿಯಂ (K)

ಮಣ್ಣಿನಲ್ಲಿನ ಸಂಕೀರ್ಣ ಪೊಟ್ಯಾಶ್ ಕಣಗಳನ್ನು ಕರಗಿಸಿ ಒದಗಿಸಿಕೊಡುವ ಸುಡೊಮಾನಡೇಸಿ ಅಣುಜೀವಿಗಳ ವರ್ಗ ಹಾಗೂ ಬ್ಯಾಸಿಲಸ್ ಸಿಲಿಕಸ್ ಸೂಕ್ಷ್ಮಾಣುಜೀವಿಗಳು ಸಸ್ಯಗಳಿಗೆ ಪೊಟ್ಯಾಷಿಯಂ ಒದಗಿಸಿಕೊಡುತ್ತವೆ.

# 40 ವರ್ಷದ ನನ್ನ ಕೃಷಿ ಅನುಭವದಲ್ಲಿ ಇಂಥಾ ಚೆಂದ ಬೆಳೆ ನಾ ನೋಡಿಲ್ಲ

ಶಂಕರ್ ರಾಮಪ್ಪ ಧರೀಗೌಡರ್
ನಾವಲಗಿ ಜಮಖಂಡಿ ತಾ.
ಬಾಗಲಕೋಟೆ ಜಿಲ್ಲೆ



ನನ್ನ 24 ಎಕರೆ ಕೃಷಿ ಭೂಮಿಯಲ್ಲಿ 22 ಎಕರೆ ಕಬ್ಬು 2 ಎಕರೆ ದ್ರಾಕ್ಷಿ ಕೃಷಿ ಇದೆ. ಕಬ್ಬಿನ ಕೃಷಿ ಅನುಭವ ನನಗೆ ಸರಿ ಸುಮಾರು 40 ವರ್ಷ ನಾನು ಇಲ್ಲಿಯ ತನಕ ರಾಸಾಯನಿಕ ಪದ್ಧತಿಯಲ್ಲಿ ಕೃಷಿ ಮಾಡಿಕೊಂಡು ಬಂದಿದ್ದೇನೆ. ಸಾಕಷ್ಟು ಕಷ್ಟ – ಸುಖ ನೋಡಿದ್ದೇನೆ. ಕೆಲವು ಬಾರಿ ಎಷ್ಟೇ ರಾಸಾಯನಿಕ ಸುರಿದರೂ ನನ್ನ ಕಬ್ಬಿನ ಇಳುವರಿ ಹೆಚ್ಚಾಗಿಲ್ಲ. ಪ್ರತಿ ಬೆಳೆಯಲ್ಲೂ ಯಾವುದಾದರೂ ಒಂದು ರೋಗ, ನನ್ನ ಸ್ನೇಹಿತ ರಮೇಶ್‌ರವರು Dr. Soil ಸಾವಯವ ಕೃಷಿ ಬಗ್ಗೆ ಮಾಹಿತಿ ಪಡೆಯಲು ಸಾವಯವ ಕೃಷಿ ತಜ್ಞರಾದ ಶ್ರೀ ಕೆ.ಆರ್. ಹುಲ್ಲುನಾಚೇಗೌಡರ ಸಾವಯವ ಕೃಷಿ ತರಬೇತಿಗೆ ಹಾಜರಾಗಲು ತಿಳಿಸಿದರು. ಅವರು ತಿಳಿಸಿದ ವಿಷಯಗಳು ಬಹಳ ಸತ್ಯ ಇದೆ ಎಂಬ ಭಾವನೆ ಬಂತು. ಸರಿ ನೋಡೋಣ ಎಂದು ಹೊಸತಾಗಿ ಲವಣಿ ಮಾಡುತ್ತಿದ್ದ ಒಂದು ಎಕರೆಗೆ Dr. Soil ಸಾವಯವ ಕೃಷಿ ಅದರ ಪಕ್ಕದಲ್ಲಿ ಒಂದು ಎಕರೆ ರಾಸಾಯನಿಕ ಕೃಷಿ ಪದ್ಧತಿ. ಎರಡು ಪದ್ಧತಿಗಳನ್ನು ಒಂದೇ ದಿನದಿಂದ ಆರಂಭಿಸಿದೆ. ಈಗ ನನ್ನ ಕಬ್ಬಿನ ತೋಟಕ್ಕೆ 3 ತಿಂಗಳು ನೀವು ನೋಡಬಹುದು. ಕಣ್ಣಿಗೆ ಕಾಣುವಷ್ಟು ಬಹಳ ವ್ಯತ್ಯಾಸ ಇದೆ. ರಾಸಾಯನಿಕ ಕೃಷಿ ಪದ್ಧತಿಯ ಕಬ್ಬಿನ ಗದ್ದೆಗಿಂತ Dr. Soil ಸಾವಯವ ಕೃಷಿ ಪದ್ಧತಿಯ ಕಬ್ಬಿನ ಗದ್ದೆ 50% ಹೆಚ್ಚಿಗೆ ಬೆಳೆದಿದೆ. ಎತ್ತರ, ಕಾಂಡದ ಗಾತ್ರ, ತಾಜಾ, ತಿಳಿ ಹಸಿರು, ಸಸ್ಯದ ಇಣುಕಿಗಳು ಬೆಳೆದಿವೆ. ಎಲೆಗಳು ಮೃದುವಾಗಿದ್ದು, ಆರೋಗ್ಯಪೂರ್ಣವಾಗಿ ಬಾಗಿವೆ. ಬಂದಿರುವ ಎಲ್ಲಾ ಮರಿಗಳು ಒಂದೇ ಎತ್ತರ, ಗಾತ್ರ ಹಾಗೂ ಆರೋಗ್ಯವಾಗಿರುವುದು ವಿಶೇಷ. ಯಾವುದೇ ಪೋಷಕಾಂಶಗಳ ಕೊರತೆ ಕಾಣುತ್ತಿಲ್ಲ, ಯಾವುದೇ ರೋಗಬಾಧೆ ಕಾಣುತ್ತಿಲ್ಲ, ಮುಂಚೆ ನನ್ನ ಕಬ್ಬಿನ ಗದ್ದೆಯಲ್ಲಿ ಬಿಳಿಚು ಕಾಣಿಸ್ತಾ ಇತ್ತು. ಈಗ ಅಂತಹ ಯಾವುದೇ ಸಮಸ್ಯೆ ನನ್ನ ತೋಟದಲ್ಲಿ ಇಲ್ಲ. ಬೆಳೆ ಆರೋಗ್ಯವಾಗಿ ನಗುನಗುತ್ತಾ ಇದೆ. 15 ದಿನಕ್ಕೆ ಒಮ್ಮೆ ನೀರು ಕೊಡ್ತಾ ಇದ್ದೀನಿ. ಬಹಳ ತಂಪಾಗಿ ಬೆಳೆ ಕಾಣುತ್ತಿದೆ. ಮಣ್ಣು ಬಹಳ ಮೃದುವಾಗಿದೆ. ಎರೆಹುಳು ಬಂದಿದೆ. ಮಣ್ಣು ಬಹಳ ಮೃದುವಾಗಿದೆ. ಎರೆಹುಳು ಬಂದಿದೆ. ಈಗಾಗಲೇ ಹಿಕ್ಕೆ ಹಾಕಿ ತೋಟದಲ್ಲಿ ಎರೆಗೊಬ್ಬರ ತಯಾರಾಗುತ್ತಿದೆ. ಪ್ರತಿದಿನ ನನ್ನ ತೋಟ ನೋಡಲು ನನಗೆ ಬಹಳ ಸಂತೋಷವಾಗುತ್ತಿದೆ. ಪ್ರಾಯೋಗಿಕವಾಗಿ ಕೂಳೆ ಕಬ್ಬಿನ 5 ಸಾಲುಗಳಿಗೆ Dr. Soil ಹಾಕಿದ್ದೇನೆ. ಅಲ್ಲಿಯೂ ಸಹ ಅದ್ಭುತವಾಗಿ ಬೆಳೆದಿದೆ. ಬೆಳೆಯ ಗುಣಲಕ್ಷಣ ನೋಡಿದರೆ ಎಕರೆಗೆ 80 ರಿಂದ 100 ಟನ್ ತನಕ ಇಳುವರಿ ಬರುವ ಹಾಗೆ ಕಾಣುತ್ತಿದೆ. ಎಕರೆಗೆ 50 ಲೀಟರ್ Dr. Soil ನೀಡಿದ್ದೇನೆ. ಖರ್ಚು ಕಡಿಮೆಯಾಗಿದೆ, ಕೆಲಸ ಕಡಿಮೆಯಾಗಿದೆ. ನೀರು ಕೊಡುವ ಕೆಲಸ ಕಡಿಮೆಯಾಗಿದೆ. ನನ್ನ 40 ವರ್ಷದ ಅನುಭವದಲ್ಲಿ ಇಂತಹ ಚೆಂದದ ಬೆಳೆ ನಾ ನೋಡಿಲ್ಲ. ನಿಜವಾಗಲೂ ಇದು ಕಬ್ಬು ಬೆಳೆಗಾರರ ಪಾಲಿಗೆ ಒಂದು ವರದಾನ.

ಕಲಿಯಿರಿ ಕಲಿಸಿರಿ

## ಕಬ್ಬು ಮತ್ತು ನೀರಿನ ನಿರ್ವಹಣೆ

ನೀರಿನ ನಿರ್ವಹಣೆ ಎಂದರೆ ಹೆಚ್ಚಿಗೆ ನೀರು ಬಿಡುವುದು ಎಂದು ಅರ್ಥವಲ್ಲ. ಅಧಿಕ ಇಳುವರಿ ಪಡೆಯಲು ಹದವರಿತು ನೀರು ಕೊಡಬೇಕು. Dr. Soil ಸಾವಯವ ಕೃಷಿಯಲ್ಲಿ ಕಬ್ಬಿಗೆ ಹೆಚ್ಚಿಗೆ ನೀರು ಕೊಡುವ ಅವಶ್ಯಕತೆ ಇರುವುದಿಲ್ಲ. ಕಬ್ಬಿನ ಗದ್ದೆಯಲ್ಲಿ ಯಾವುದೇ ಕಾರಣಕ್ಕೂ ನೀರು ನಿಲ್ಲುವಂತೆ ಮಾಡಬಾರದು. ಒಂದು ವೇಳೆ ನೀರು ನಿಂತರೆ ಮಣ್ಣಿನಲ್ಲಿ ಸೂಕ್ಷ್ಮಾಣುಜೀವಿಗಳ ಎರೆಹುಳುಗಳ ಚಟುವಟಿಕೆ ಕುಂಠಿತಗೊಂಡು ಸಸ್ಯಕ್ಕೆ ಪೋಷಕಾಂಶಗಳ ಕೊರತೆ ಉಂಟಾಗುತ್ತದೆ. ಕಬ್ಬು ಲವಣಿ ಮಾಡಿದ ಪ್ರಾರಂಭದಲ್ಲಿ ಸಸಿಗಳು ಬದುಕಿ ಉಳಿಯುವ ತನಕ ಮೇಲಿಂದ ಮೇಲೆ ನೀರು ಹಾಯಿಸುವುದು ಬಹಳ ಮುಖ್ಯ. ತದನಂತರ ಕಬ್ಬನ್ನು ಕಪ್ಪು ಮಣ್ಣಿನಲ್ಲಿ ಬೆಳೆದಿದ್ದರೆ 15 ದಿವಸಗಳಿಗೊಮ್ಮೆ ನೀರು ಹಾಯಿಸಬೇಕು. ಕೆಂಪು ಮಣ್ಣಿನಲ್ಲಾದರೆ 8 ದಿವಸಗಳಿಗೊಮ್ಮೆ ನೀರು ಹಾಯಿಸಿದರೆ ಸಾಕಾಗುತ್ತದೆ.

ಕಬ್ಬಿನ ಬೆಳವಣಿಗೆ ಕಾಲದಲ್ಲಿ ಈ ಕ್ರಮವನ್ನು ಅತ್ಯವಶ್ಯಕವಾಗಿ ಅನುಸರಿಸಬೇಕು. ಹೆಚ್ಚು ನೀರು ಬಿಟ್ಟರೆ ಕಬ್ಬಿನ ಇಳುವರಿ ಕಡಿಮೆಯಾಗುವ ಸಂಭವವಿರುತ್ತದೆ. ನೀರನ್ನು ಆಗಾಗ ತಡೆದು ಹಾಯಿಸಿದರೆ ಇಳುವರಿ ಹೆಚ್ಚುತ್ತದೆ. ಕಬ್ಬಿನಲ್ಲಿ ಗುನ್ನ ಬರುವಾಗ ಹೆಚ್ಚಿನ ನೀರು ಕೊಡಬಾರದು. ಕಬ್ಬಿನ ಕಟಾವು ಇನ್ನೂ ಒಂದು ತಿಂಗಳಿರುವಾಗ ನೀರು ಹಾಯಿಸುವುದು ಪೂರ್ತಿ ನಿಲ್ಲಿಸಬೇಕು. ಇದರಿಂದ ಸಕ್ಕರೆ ಪ್ರಮಾಣ ಹೆಚ್ಚಾಗುತ್ತದೆ, ಕಬ್ಬಿನ ಬೇರುಗಳಲ್ಲಿ ಸೂಕ್ಷ್ಮ ತಂತುಗಳಿದ್ದು 60 ಸೆಂ.ಮೀ. ಆಳದಿಂದ ತೇವಾಂಶವನ್ನು ಹೀರಿಕೊಳ್ಳುವ ಶಕ್ತಿ ಪಡೆದಿರುತ್ತದೆ.



ಕಬ್ಬಿನ ಗದ್ದೆಯಲ್ಲಿ ರವದಿ ಹಾಗೂ ಜೈವಿಕ ತ್ಯಾಜ್ಯಗಳ ಹೊದಿಕೆ ಹಾಕಿದ್ದರೆ 20 ರಿಂದ 30 ದಿನಗಳಿಗೊಮ್ಮೆ ನೀರು ಕೊಟ್ಟರು ತೇವಾಂಶ ಕಾಪಾಡಿಕೊಳ್ಳುತ್ತದೆ. ಇದು ಹೇಗೆ ಸಾಧ್ಯ? ನಾವು 3 ದಿನಗಳಿಗೊಮ್ಮೆ ನೀರು ಬಿಟ್ಟರು ಬೆಳೆ ಒಣಗುತ್ತಿದೆ ಎಂದು ನಿಮಗನಿಸಬಹುದು. ರಾಸಾಯನಿಕ ಕೃಷಿಯಲ್ಲಿ ಮಣ್ಣು ತೇವಾಂಶ ಹಿಡಿದಿಟ್ಟುಕೊಳ್ಳುವ ಶಕ್ತಿ ಕಳೆದುಕೊಂಡಿರುತ್ತದೆ. ಮಣ್ಣು ಗಟ್ಟಿಯಾಗಿ ನೀರು ಭೂಮಿ ಹಾಳಕ್ಕೆ ಬಸಿದಿರುವುದಿಲ್ಲ. ಪದೇಪದೆ ನೀರು ಬಿಟ್ಟು ಮಣ್ಣಿನ ಮೇಲ್ಪದರ ಬಹಳ ಗಟ್ಟಿಯಾಗಿರುವುದೇ ಇದಕ್ಕೆ ಕಾರಣ Dr. Soil ಸಾವಯವ ಕೃಷಿಯಲ್ಲಿ ಮಣ್ಣು ಮೃದುವಾಗುತ್ತದೆ. ನಾವು ಬೆಳೆಗೆ ಕೊಟ್ಟ ನೀರು ಗುರುತ್ವಾಕರ್ಷಣೆ ಮೂಲಕ ಭೂಮಿಗೆ ಇಂಗುವಾಗ ಬೇರಿನ ಸಮೂಹಕ್ಕೆ ತೇವಾಂಶ ಸಿಗುತ್ತದೆ. ಇಂಗಿ ಭೂಮಿಯ ಒಳಗೆ ಹೋದ ನೀರು ನಾವು ಬೆಳೆಗೆ ನೀರು ಕೊಡುವುದು ತಡಮಾಡಿದಾಗ ಕೇಶಾಕರ್ಷಣೆ ಮೂಲಕ ತೇವಾಂಶ ಬೇರಿನ ಸಮೂಹಕ್ಕೆ ಸಿಗುತ್ತದೆ. ಈ ತಂತ್ರವನ್ನು ಅರಿತು ತಮ್ಮ ಜಾಣತನ ಬಳಸಿ Dr. Soil ಸಾವಯವ ಕೃಷಿಯಲ್ಲಿ ರೈತರು ಇಂತಹ ಪ್ರಾಕೃತಿಕ ನೀರು ನಿರ್ವಹಣೆಗೆ ಅವಕಾಶ ಮಾಡಿಕೊಡಬೇಕು.

ಕಲಿಯಿರಿ ಕಲಿಸಿರಿ

## ಕಬ್ಬು ಮತ್ತು ಮಣ್ಣು

ಕಬ್ಬನ್ನು ಎಲ್ಲಾ ತರದ ಮಣ್ಣುಗಳಲ್ಲಿ ಬೆಳೆಯಬಹುದು. ಆದರೆ ಅತೀಕ್ಷಾರ ಮತ್ತು ಹುಳಿ ಮಣ್ಣುಗಳಲ್ಲಿ ಸರಿಯದ ಬೆಳವಣಿಗೆ ಇರುವುದಿಲ್ಲ. ಇದಕ್ಕೆ ಕಾರಣ ಬೆಳೆಗೆ ಬೇಕಾದ ಪೋಷಕಾಂಶಗಳ ಕೊರತೆಯುಂಟಾಗಿ ಬೆಳವಣಿಗೆ ಕುಂಠಿತಗೊಂಡು ಇಳುವರಿ ಕಡಿಮೆಯಾಗುತ್ತದೆ.

ಮಣ್ಣಿನಲ್ಲಿ ಸಾಕಷ್ಟು ಸಾವಯವ ಮತ್ತು ಜೈವಿಕ ತ್ಯಾಜ್ಯಗಳ ಅಂಶವಿದ್ದರೆ ಕಬ್ಬು ಹುಲುಸಾಗಿ ಬೆಳೆಯುತ್ತದೆ. ಕಬ್ಬು ದೀರ್ಘಾವದಿ ಬೆಳೆಯಾದ್ದರಿಂದ ಪೋಷಕಾಂಶಗಳು ಬೆಳೆಗೆ 365 ದಿನ ಪೂರೈಕೆಯಾಗಬೇಕಾಗುತ್ತದೆ. ಆದ್ದರಿಂದ ಮಣ್ಣು ಫಲವತ್ತಾಗಿದ್ದರೆ ಇಳುವರಿ ಹೆಚ್ಚುತ್ತದೆ. ಹೀಗಾಗಿ ಮಣ್ಣಿನಲ್ಲಿ ಜೈವಿಕ ಪರಿಸರ ನಿರ್ಮಾಣವಾಗಿ ಮಣ್ಣು ಜೀವಂತವಾಗಿರಬೇಕು ರೈತನ ಮಿತ್ರ ಎರೆಹುಳು ಮಣ್ಣಿನಲ್ಲಿ ಇರಬೇಕು. Dr. Soil ಸಾವಯವ ಕೃಷಿಯಲ್ಲಿ Dr. Soil ಬಳಸಿದಾಗ ಮಣ್ಣಿನ ರಸಸಾರ ದಿನ ಕಳೆದಂತೆ ಸಮಸ್ಥಿತಿಗೆ ಬರುತ್ತದೆ. ಮಣ್ಣು ಮೃದುವಾಗುತ್ತದೆ. ಮಣ್ಣು ಚೆನ್ನಾಗಿ ಗಾಳಿಯಾಡುತ್ತದೆ. ಇದರಿಂದ ಮಣ್ಣಿನ ಜೀವಿಗಳು ಅಭಿವೃದ್ಧಿಗೊಂಡು ಫಲವತ್ತತೆ ಹೆಚ್ಚುತ್ತದೆ. Dr. Soil ನಲ್ಲಿ ಸಾವಯವ ಇಂಗಾಲವಿರುವುದರಿಂದ ಮಣ್ಣಿನಲ್ಲಿ ಎರೆಹುಳುಗಳು ಕ್ರಿಯಾಶೀಲವಾಗಿರುತ್ತವೆ. Dr. Soil ಬಳಕೆಯಿಂದ ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಯಿಂದ ವ್ಯಾಮ್ ಶೀಲೀಂದ್ರಗಳು ಅಭಿವೃದ್ಧಿಗೊಂಡು ಮಣ್ಣು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ಕಡಿಮೆ ನೀರಾವರಿ ಪರಿಸ್ಥಿತಿಗಳಲ್ಲಿ ಸಸ್ಯಗಳಿಗೆ ಅನಾವೃಷ್ಟಿ (ಬರ) ಸಹಿಸುವ ಶಕ್ತಿ ಹೆಚ್ಚಿಸುತ್ತದೆ.



ನಗುವ ಕಬ್ಬು ನೋಡಬೇಕೆ? ಬನ್ನಿ ನಮ್ಮ ಕಬ್ಬಿನ ಗದ್ದೆಗೆ

# ಸವಸುದ್ದಿಯಲ್ಲಿ ಸಾವಯವ ಕೃಷಿ ಸುದ್ದಿ

**ನಾಗಪ್ಪ ಯಮುನಪ್ಪ ನವಿಲಾಳ**
ಸವಸುದ್ದಿ ರಾಯಭಾಗ ತಾ.
ಬೆಳಗಾವಿ ಜಿಲ್ಲೆ.

ನೌಕರಿ ಬೇಡ, ರಾಜಕೀಯ ಬೇಡ, ಡಾ.ಸಾಯಿಲ್ ಬಳಸಿ ಸಾವಯವ ಕೃಷಿ ಮಾಡಲು ಹೊರಟರೇ ಜೀವನದಲ್ಲಿ ಹೊಸ ಬದಲಾವಣೆ. ಕೃಷಿಯಲ್ಲಿ ಹೊಸ ಚೈತನ್ಯ ಕಾಣುವುದರಲ್ಲಿ ಯಾವುದೇ ಅನುಮಾನವಿಲ್ಲ.

ನಮ್ಮ ಸ್ನೇಹಿತರಾದ ಡಾ॥ ಅಜಿತ್ ಶಿವಪ್ಪ ಜೋಡಟ್ಟಿರವರು ಒಂದು ಸಂಜೆ ಭೇಟಿಯಾಗಿ ನಾಳೆ ಕೋಲಾರ, ಬೆಂಗಳೂರು, ಮೈಸೂರು ಭಾಗದಲ್ಲಿ Dr. Soil ಸಾವಯವ ಕೃಷಿಯಲ್ಲಿ ಬೆಳೆದ ಬೆಳೆಗಳನ್ನು ನೋಡಿ ಬರೋಣ ಎಂದು ಹೇಳಿದರು. ಸರಿ ನಾವು ತಯಾರಾಗಿ ಹೊರೆಟೆವು ನಿಜಕ್ಕೂ ನನ್ನ ಜೀವನದ ಶ್ರೇಷ್ಠ ಪ್ರವಾಸ ಎಂದು ಹೇಳಿದರೆ ತಪ್ಪಾಗಲಾರದು. ಆ ಪ್ರವಾಸ ಮುಗಿಸಿ ಬಂದ ಮೇಲೆ ನನ್ನ ಕಬ್ಬಿನಗದ್ದೆ ಪ್ರವಾಸಿ ಕೇಂದ್ರವಾಗಿದೆ. ನನ್ನದು 25 ವರ್ಷಗಳ ಕೃಷಿ ಅನುಭವ. 10 ಎಕರೆ ಕಬ್ಬಿನ ಗದ್ದೆ ಇದೆ. 10 ಎಕರೆಗೆ ನಾನು Dr. Soil ಬಳಕೆ ಮಾಡಿದ್ದೇನೆ. Dr. Soil ಬಳಸಿ ಎರಡೂವರೆ ತಿಂಗಳಾಯಿತು. ಈಗ ನನ್ನ ಕಬ್ಬಿನ ಗದ್ದೆ ನೋಡಲು ಆನಂದವಾಗುತ್ತದೆ. Dr. Soil ಬಳಸಿದ ಮೇಲೆ ನನ್ನ ಮಣ್ಣು ಮೃದುವಾಗಿದೆ. ಎರೆಹುಳು ಕಂಡುಬಂದಿದೆ. ಮಣ್ಣು ಸಡಿಲಿಸಿ ನೋಡಿದರೆ ಬಿಳಿಪಾದ ಸೂಕ್ಷ್ಮ ಬೇರುಗಳು ಮಣ್ಣಿನಲ್ಲಿ ಹರಡಿವೆ. ಬೇರುಗಳು ಬಹಳ ಚೆನ್ನಾಗಿ ಅಭಿವೃದ್ಧಿಗೊಂಡಿವೆ. ಕಬ್ಬಿನ ಮರಿಗಳು ಸದೃಢವಾಗಿ ಬಂದಿವೆ. ಬಂದಿರುವ ಎಲ್ಲ ಮರಿಗಳು ಸದೃಢವಾಗಿರುವುದು ವಿಶೇಷ. ಮರಿಗಳ ಸಂಖ್ಯೆ ಹೆಚ್ಚಾಗಿದೆ. ಕಬ್ಬಿನ ಕಾಂಡದ ದಪ್ಪ, ಎತ್ತರ, ತಿಳಿ ಹಸಿರಿನ ಬಣ್ಣ, ದಳಗಳ ಸಧೃಢತೆ ನೋಡಿದರೆ ಆನಂದವಾಗುತ್ತದೆ. ನನ್ನ ಕಬ್ಬಿನ ಗದ್ದೆ ನಗುನಗುತ್ತಾ ಇದೆ. ಈ ಕಟಾವಿನಲ್ಲಿ 80 ಟನ್ ಇಳುವರಿ ಬರುವ ನಿರೀಕ್ಷೆ ಇದೆ. ಇಂತಹ ಸಂತೋಷದ ವಿಷಯ ತಿಳಿಸಲು ನನಗೆ ಹೆಮ್ಮೆ ಇದೆ.

### ಆನಂದದ ನುಡಿ

ನನ್ನ ಜೀವನದಾಗ ಇಂಥಾ ಬೆಳೆ ನೋಡಲಿಲ್ಲ. ನಾನು ಸದಾ ರಾಜಕೀಯ ಅಂಥಾ ಓಡಾಡಿಕೊಂಡು ಇರ್ತಾ ಇದ್ದೆ. Dr. Soilಸಾವಯವಕೃಷಿಮಾಡಿದಮೇಲೆದಿನಕ್ಕೆ ಒಂದು ಬಾರಿಯದರೂ ಕಬ್ಬು ನೋಡಲು ಬರಲಿಲ್ಲ. ಅಂದರೆ ಸಮಾಧಾನ ಇರಲ್ಲ. ಇನ್ನೂ ನನ್ನ ಜೀವನದಲ್ಲಿ ರಾಸಾಯನಿಕ ಗೊಬ್ಬರ ಮುಟ್ಟಲ್ಲ ನಮ್ಮ ಮಕ್ಕಳಿಗೂ Dr. Soil ಸಾವಯವ ಕೃಷಿ ಮಾಡಬೇಕು ಎಂದು ಹೆಮ್ಮೆಯಿಂದ ಹೇಳುತ್ತೇನೆ. ನನ್ನ ಪರಿಚಯದ ಎಲ್ಲ ರೈತರಿಗೂ ಈ ಕೃಷಿ ಬಗ್ಗೆ ಮಾಹಿತಿ ನೀಡುತ್ತೇನೆ. ಒಕ್ಕಲುತನ ಚೆನ್ನಾಗಿ ಬೆಳೆಯಲಿ, ರೈತ ಸಮುದಾಯಕ್ಕೆ ಒಳ್ಳೆಯದಾಗಲಿ.

। ನಾಗಪ್ಪ ಯಮುನಪ್ಪ ನವಿಲಾಳ

# ಕಬ್ಬಿನ ಗದ್ದೆಯಲ್ಲಿ ಬಿಳಿಚು ನಿವಾರಣೆ ಆಗಿದೆ...

**ಬಸಪ್ಪ ಮಲ್ಲಿಕಾರ್ಜುನ ಮುಕಾರ**
ಇಟ್ಟನಾಳ, ರಾಯಭಾಗ ತಾ. ಬೆಳಗಾಂ ಜಿಲ್ಲೆ

ರಾಸಾಯನಿಕ ಕೃಷಿಯಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ ಕಬ್ಬಿನ ಗದ್ದೆಯಲ್ಲಿ ಬಿಳಿಚು ಹೋಗುತ್ತಿರಲಿಲ್ಲ. ಈಗ ನಾನು Dr. Soil ಬಳಸಿದ ನಂತರ ಬಿಳಿಚು ನಿವಾರಣೆ ಆಗಿದೆ. ಜೊತೆಗೆ ಕಬ್ಬು ಹಿಂದೆಂದೂ ಕಾಣದಂತಹ ಸದೃಢ ಬೆಳೆ ಬಂದಿದೆ. ನಮ್ಮದು ಇಟ್ಟನಾಳ ಗ್ರಾಮ ರಾಯಭಾಗ ತಾಲ್ಲೂಕು ಬೆಳಗಾವಿ ಜಿಲ್ಲೆ. ನಮ್ಮದು 27 ಎಕರೆ ಜಮೀನಿದೆ. ಬಾಳೆ ಐದು ಎಕರೆ ಇದೆ. ನಾನು ಸಾವಯವ ಬಾಳೆ ಬೆಳೆಯುತ್ತಿದ್ದೇನೆ. ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರವಾಗಿ ವೆಲ್‌ವೆಟ್‌ಬಿನ್ಸ್ ಬೆಳೆದು ಭೂಮಿಗೆ ಸೇರಿಸಿ ಬಾಳೆಯಲ್ಲಿ ನಿರಂತರವಾಗಿ ಪೋಷಕಾಂಶಗಳ ನಿರ್ವಹಣೆಗೆ ಸಿದ್ಧತೆ ನಡೆಸಿದ್ದೇನೆ. ನನ್ನ ಕೃಷಿಯಲ್ಲಿ ಇಂತಹ ಬದಲಾವಣೆಗೆ ಕಾರಣರಾದವರು ನಮ್ಮ ಸವಸುದ್ದಿ ಗ್ರಾಮದ ಡಾ॥ ಅಜಿತ್ ಶಿವಪ್ಪ ಜೋಡಟ್ಟಿ ಹಾಗೂ ಸಾವಯವ ಕೃಷಿ ತಜ್ಞರಾದ ಕೆ.ಆರ್. ಹುಲ್ಲುನಾಚೇಗೌಡರು. ಇವರ ಸಹಕಾರದಿಂದ ನಾವೆಲ್ಲ ರೈತರೇ ಕೂಡಿಕೊಂಡು ಕೋಲಾರ, ಬೆಂಗಳೂರು, ಮೈಸೂರು ಭಾಗದಲ್ಲಿ ಕೃಷಿ ಪ್ರವಾಸಕ್ಕೆ ಹೋದೆವು. ಆ ಪ್ರವಾಸದ ಅನುಭವದಿಂದ ನಮ್ಮ ಕೃಷಿ ಇಂದು ಅಭಿವೃದ್ಧಿಯತ್ತ ಸಾಗಿದೆ. ನನ್ನ ಐದು ಎಕರೆ ಬಾಳೆಗೆ Dr. Soil ಬಿಟ್ಟು ಬೇರೆ ಯಾವುದೇ ಗೊಬ್ಬರ ನೀಡಿಲ್ಲ ಬಾಳೆ ಬಹಳ ಚೆನ್ನಾಗಿ ಬೆಳಿತಾ ಇದೆ. ಎಲೆಗಳು ಅಗಲವಾಗಿ, ದಪ್ಪವಾಗಿದೆ. ತಿಳಿ ಹಸಿರು ಬಣ್ಣದಿಂದ ಕೂಡಿವೆ, ಕಾಂಡ ದಪ್ಪವಾಗಿದೆ, ಸುಳಿಗಳು ಆರೋಗ್ಯಪೂರ್ಣವಾಗಿ ಬಿಟ್ಟುಕೊಳ್ಳುತ್ತಿವೆ. Dr. Soil ಬಳಸಿದ ನಂತರ ಮಣ್ಣು ಬಹಳ ಮೃದುವಾಗಿದೆ. ನೀರು ಕಡಿಮೆಯಾದರೂ ಬೆಳೆ ಬಾಡುವುದಿಲ್ಲ. ನೀರು ಬಿಡುವ ಪ್ರಮಾಣ ಕಡಿಮೆಯಾಗಿದೆ. ರಾಸಾಯನಿಕ ಕೃಷಿಗಿಂತ ಸಾಕಷ್ಟು ಕಡಿಮೆ ಖರ್ಚಾಗಿದೆ. ಭೂಮಿ ಆರೋಗ್ಯ ಉತ್ತಮವಾಗುತ್ತಿದೆ. ನಿಜವಾಗಲೂ Dr. Soil ಬಳಕೆಯಿಂದ ನನ್ನ ಕೃಷಿ ಹಿಂದೆಂದೂ ಕಾಣದಷ್ಟು ಸಮೃದ್ಧಿಯಾಗಿದೆ.



# ಬಾಳೆ ಸದೃಢವಾಗಿ ಬೆಳಿತಾ ಇದೆ...





# ಮಡದಿ ತೋರಿದ ಬುದ್ಧಿವಂತಿಕೆ, ನನ್ನ ಕೃಷಿಯಲ್ಲಿ ಸಿರಿವಂತಿಕೆ

## ನಮ್ಮ ಕೃಷಿ ದಿಕ್ಕು ಬದಲಿಸಿದ ಮಹಾನ್ ಮಾಂತ್ರಿಕ Dr. Soil

ನಮಗೆ ಕೃಷಿ ಬಹಳ ಬಹಳ ಸುಲಭ ಆಗಿದೆ. ಈಗ ಕೃಷಿಯಲ್ಲಿ ನೆಮ್ಮದಿ ಇದೆ. ಈ ಮುಂಚೆ ರಾಸಾಯನಿಕ ಕೃಷಿ ಮಾಡುವಾಗ ಬಹಳ ಒತ್ತಡ ಇರುತ್ತಿತ್ತು. ಆ ಔಷಧಿ ಈ ಔಷಧಿ, ರೋಗಬಾಧೆ, ನೀರಿನ ಸಮಸ್ಯೆಯಿಂದ ಕಂಗಾಲಾಗಿದ್ದೆವು. ಹುಲ್ಲುನಾಚೇಗೌಡರ ಟಿ.ವಿ. ಕಾರ್ಯಕ್ರಮ ನೋಡಿದ ದಿನದಿಂದ ನಾನು ಏಕ್‌ದಮ್ FREE ಆಗಿಬಿಟ್ಟಿದ್ದೀನಿ. ನಮ್ಮ ಜಮೀನಿಗೆ 3 ಕಿ.ಮೀ.ನಿಂದ ಬಾವಿಯಲ್ಲಿ ಸಿಗುವ ಅಲ್ಪಸ್ವಲ್ಪ ನೀರು ಪಂಪ್ ಮಾಡಿ ಕೃಷಿ ಮಾಡಬೇಕು. ಒಟ್ಟಿನಲ್ಲಿ ನೀರು ಇಲ್ಲ ಅಂಥಾನೇ ಹೇಳಬಹುದು. ಹೋದ ವರ್ಷ ಈ ಬೇಸಿಗೆಯಲ್ಲಿ ಕಬ್ಬು ಬೆಳೆ ಏನು ಸುಖ ಇರಲಿಲ್ಲ. ಬೆಳೆವಣಿಗೆ ಇಲ್ಲ, ಒಣಗಿತ್ತು. ಈ ಸಾರಿ ಒಮ್ಮೆ ಭೂಮಿ ಹಸಿ ಮಾಡಿ Dr. Soil ಬಿಟ್ಟಿದ್ದು ಬಿಟ್ಟರೆ ಕಬ್ಬಿಗಾಗಿ ಏನೂ ಶ್ರಮ ಹಾಕಿಲ್ಲ. ಈ ಕಡು ಬೇಸಿಗೆಯಲ್ಲೂ ನೀರಿನಲ್ಲಿ ತೊಳೆದು ಇಟ್ಟ ಹಾಗೆ ನಮ್ಮ ಬೆಳೆ ಇದೆ. ಖರ್ಚು ಕಡಿಮೆ, ನೀರು ಕಡಿಮೆ, ಕೂಲಿ ಕಡಿಮೆ, ನನ್ನ ಜೀವನದಾಗ ಇಂಥಾ ಚೆಂದ ಬೆಳೆ ನಾನು ನೋಡಿಲ್ಲ. ನನ್ನ 40 ಎಕರೆ ಕೃಷಿ ಯಶಸ್ವಿಯಾಗಿ ಸಾಗಿದೆ.

| ಮಹಾದೇವ ಶಿವಪ್ಪ ಜೋಡಟ್ಟಿ ಸವಸುದ್ದಿ

ನಾನು ಎಂದೆಂದೂ ಮರೆಯಲಾಗದ ಉದಯ ಟಿ.ವಿ. ಕಾರ್ಯಕ್ರಮ.

ಅದೊಂದು ದಿನ ಮಂಗಳವಾರ ಸಂಜೆ 4.00 ಕ್ಕೆ ಸರಿಯಾಗಿ ನಾನು ಮನೆಯ ಹೊರಗೆ ಕುಳಿತಿದ್ದೆ. ಉದಯ ಟಿ.ವಿ.ಯಲ್ಲಿ ಸಾವಯವ ಕೃಷಿಗೆ ಸಂಬಂಧಿಸಿದಂತೆ ಫೋನ್ – ಇನ್ ಕಾರ್ಯಕ್ರಮದ ನೇರ ಪ್ರಸಾರ ಮೂಡಿ ಬರುತ್ತಿತ್ತು. ನನ್ನ ಮಡದಿ ಟಿ.ವಿಯಲ್ಲಿ ಕೃಷಿ ಕಾರ್ಯಕ್ರಮ ಬರುತ್ತಿದೆ. ಬನ್ನಿ ನೋಡಿ ಎಂದು ಹೇಳಿದರು. ಆ ಕಾರ್ಯಕ್ರಮ ವೀಕ್ಷಣೆಯಲ್ಲಿ ವೀಕ್ಷಕರ ಪ್ರಶ್ನೆಗಳಿಗೆ ಶ್ರೀ ಕೆ.ಆರ್. ಹುಲ್ಲುನಾಚೇಗೌಡರು ಸಾವಯವ ಕೃಷಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಕೃಷಿಯನ್ನು ಸರಳವಾಗಿ ಮಾಡುವ ಅನೇಕ ತಂತ್ರಗಳನ್ನು ಅವರು ತಿಳಿಸಿದರು. ಟಿ.ವಿ. ಪರದೆಯ ಮೇಲೆ ಬಂದ ಅವರ ದೂರವಾಣಿ ಸಂಖ್ಯೆ ಬರೆದುಕೊಂಡೆ. ಟಿ.ವಿ. ಕಾರ್ಯಕ್ರಮದ ನಂತರ ಅವರಿಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ಅನೇಕ ವಿಷಯಗಳನ್ನು ತಿಳಿಸಿದರು. ಕಬ್ಬಿನ ಗದ್ದೆಗೆ Dr. Soilದ್ರವ ರೂಪದ ಸಾವಯವ ಗೊಬ್ಬರ ಹಾಕಲು ತಿಳಿಸಿದರು. ಅವರು ತಿಳಿಸಿದಂತೆ Dr. Soil ಹಾಕಿದೆ. ಅಷ್ಟರಲ್ಲಿ ಕಬ್ಬಿಗೆ ಮೂರೂವರೆ ತಿಂಗಳು ಆಗಿತ್ತು. ತದ ನಂತರ ಅವರ ಮಾರ್ಗದರ್ಶನದಲ್ಲಿ ಆರು ತಿಂಗಳು ಕಬ್ಬು ಮತ್ತು ಬಾಳೆಗೆ ಅವರು ತಿಳಿಸಿದ ಹಾಗೆ ಕೃಷಿ ಕಾರ್ಯ ಮಾಡಿದೆ. ನೀರಿಲ್ಲದೆ ಏಳೂವರೆ ತಿಂಗಳಿಗೆ ಕಬ್ಬು ಕಟಾವು ಮಾಡಬೇಕಾಯಿತು. ಎಕರೆಗೆ 62 ಟನ್ ಇಳುವರಿ ಬಂತು. 40 ಟನ್ ಇಳುವರಿಯಿಂದ 62 ಟನ್‌ಗೆ ನನ್ನ ಹೊಲದಲ್ಲಿ ಇಳುವರಿ ಹೆಚ್ಚಿದ್ದು ನನಗೆ ಬಹಳ ಆಶ್ಚರ್ಯವಾಯಿತು. ನಮಗೆ 40 ಎಕರೆ ಜಮೀನಿದೆ. ಕಬ್ಬು, ಬಾಳೆ ನಮ್ಮ ಮುಖ್ಯ ಬೆಳೆಗಳು. ನಾನು ಈಗ ಪೂರ್ತಿ ರಾಸಾಯನಿಕ ಬಂದ್ ಮಾಡಿ ಸಾವಯವ ಕೃಷಿ ಮಾಡುತ್ತಿದ್ದೇನೆ. ಈಗ ಕಬ್ಬಿಗೆ ಪ್ರತಿ ಎಕರೆಗೆ 50 ಲೀಟರ್ Dr. Soil ಕೊಟ್ಟಿದ್ದೇನೆ. ಕೇವಲ 2 ಗಂಟೆ ಡ್ರಿಪ್‌ನಲ್ಲಿ ನೀರು ಹಾಯಿಸಿ ಮಣ್ಣನ್ನು ಹಸಿ ಮಾಡಿ Dr. Soil ನೀಡಿದ್ದೇನೆ. ನಮಗೆ ನೀರಿನ ಕೊರತೆ ಇದೆ. 2 ತಿಂಗಳಿನಿಂದ ನೀರು ಕೊಟ್ಟಿಲ್ಲ. ಆದರೂ ಕಬ್ಬು ಬಹಳ ಸದೃಢವಾಗಿದೆ. ಮರಿಗಳು ಹೆಚ್ಚಿಗೆ ಬಂದಿವೆ. ಬಂದಿರುವ ಮರಿಗಳೆಲ್ಲಾ ಸದೃಢವಾಗಿವೆ. ನೀರು ಹಾಯಿಸಿರುವ ಕಬ್ಬಿನ ಗದ್ದೆಗೆ ಸರಿಸಮವಾಗಿ ಬೆಳೆದು ನಿಂತಿವೆ. ಎತ್ತರ, ದಪ್ಪ, ಬಣ್ಣ ಹೊಳಪು ಯಾವುದರಲ್ಲೂ ಕಡಿಮೆ ಇಲ್ಲ. ಯಾವುದೇ ಔಷದಿ ಸಿಂಪರಣೆ ಮಾಡಿಲ್ಲ. ಯಾವುದೇ ರೋಗವಿಲ್ಲ, ನಿಜವಾಗಿಯೂ ನನ್ನ 20 ವರ್ಷದ ಕೃಷಿ ಅನುಭವದಲ್ಲಿ ಇಂಥಾ ಬೆಳೆ ನಾನು ನೋಡಿಲ್ಲ. ನನ್ನ ತೋಟ ನೋಡಲು ನೂರಾರು ರೈತರು ಬಂದು ಹೋಗುತ್ತಿದ್ದಾರೆ. ಎಲ್ಲರೂ ಕಡಿಮೆ ಖರ್ಚು, ಕಡಿಮೆ ನೀರು, ರಾಸಾಯನಿಕ ರಹಿತ, ಸಿಂಪರಣೆ ರಹಿತ. ನಮ್ಮ ಕೃಷಿ ನೋಡಿ ಆಶ್ಚರ್ಯ ಪಡುತ್ತಿದ್ದಾರೆ. ನಾನು ಸಹ ನೂರಾರು ರೈತರಿಗೆ ನನ್ನ ಕೃಷಿ ಅನುಭವ ತಿಳಿಸಿ ನನ್ನ ಕೈಲಾದ ಸೇವೆ ಮಾಡುತ್ತಿದ್ದೇನೆ. ಸಾವಯವ ಕೃಷಿಯಲ್ಲಿ Dr. Soil, ರವದಿ, ಎರೆಹುಳುಗಳ ಪ್ರಾಮುಖ್ಯತೆಯನ್ನು ತಿಳಿಸುತ್ತಿದ್ದೇನೆ. ●

> **Dr. Soil ಬಳಸಿದ ಕಬ್ಬಿನ ಗದ್ದೆಯಲ್ಲಿ ರವದಿ ಹೊದಿಕೆ ಹಾಕಿದಾಗ ಭೂಮಿಯಲ್ಲಿ ತೇವಾಂಶ ಕಾಯ್ದುಕೊಳ್ಳುತ್ತಿದೆ. ಜೊತೆಗೆ ಎರೆಹುಳು ರವದಿಯನ್ನು ತಿಂದು ಎರೆಗೊಬ್ಬರ ಉತ್ಪತ್ತಿಯಾಗುತ್ತಿದೆ. ಇಂತಹ ಒಂದು ಬದಲಾವಣೆ ನಮ್ಮ ಹೊಲದಲ್ಲಿ ಆಗಿದೆ.**
>
> | ಮಹದೇವ್ ಶಿವಪ್ಪ ಜೋಡಟ್ಟಿ



ಕಲಿಯಿರಿ ಕಲಿಸಿರಿ

# ಕಬ್ಬು ಲವಣಿ ಪೂರ್ವ ಸಿದ್ಧತೆ ಹೇಗೆ?

**ಬೆಳೆ ಪರಿವರ್ತನೆ:**

ಹೊಸದಾಗಿ ಲವಣಿ ಮಾಡುವ ಕಬ್ಬಿನ ಗದ್ದೆಗೆ ಬೆಳೆ ಪರಿವರ್ತನೆ ಮಾಡುವುದು ಸೂಕ್ತ ಬೆಳಗಾಂ ಜಿಲ್ಲೆಯಲ್ಲಿ ಮುಂಗಾರಿನಲ್ಲಿ ಸೋಯ ಅವರೆ ಬಿತ್ತಿ ಅದು ಕಟಾವಾದ ಮೇಲೆ ಕಬ್ಬು ನೆಡುತ್ತಾರೆ. ಸೋಯ ಅವರೆ ದ್ವಿದಳ ಧ್ಯಾನ್ಯವಾಗಿರುವುದರಿಂದ ವಾತಾವರಣದಲ್ಲಿನ ಸಾರಜನಕವನ್ನು ಮಣ್ಣಿನಲ್ಲಿ ಸ್ಥಿರೀಕರಿಸುತ್ತದೆ. ಅವರೆ ಬಲಿತಾಗ ಬೀಳುವ ತರುಗು ಮಣ್ಣಿನ ಫಲವತ್ತತೆ ಹೆಚ್ಚಿಸುತ್ತದೆ.

**ಹಸಿರೆಲೆ ಗೊಬ್ಬರ:**

ಕಬ್ಬು ಬೆಳೆಯುವ ಜಮೀನಿನಲ್ಲಿ ರೈತರು ಅಪ್ಸಣಬು, ಡಯಾಂಚ, ವೆಲ್‌ವೆಟ್ ಬೀನ್ಸ್ ಮುಂತಾದ ತಮ್ಮ ಪ್ರದೇಶಕ್ಕೆ ಅನುಕೂಲವೆನಿಸುವ ದ್ವಿದಳ ಧಾನ್ಯಗಳ ಬೆಳೆಗಳನ್ನು ಬಿತ್ತಿ ಹೂ ಬಿಡುವ ಮುಂಚೆ ಅದನ್ನು ಜಮೀನಿನಲ್ಲಿಯೇ ಕತ್ತರಿಸಿ ಮಣ್ಣಿಗೆ ಸೇರುವಂತೆ ಮಾಡಿ ಕಬ್ಬು ನೆಡುವುದು ಬಹಳ ಲಾಭದಾಯಕ ಹೀಗೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ.

**ಜಮೀನು ಹದಮಾಡುವುದು:**

ಕಬ್ಬು ಬಹುವಾರ್ಷಿಕ ಬೆಳೆಯಾಗಿರುವುದರಿಂದ ಕಬ್ಬು ನೆಡುವ ಜಮೀನನ್ನು ಚೆನ್ನಾಗಿ ಹದಮಾಡಬೇಕಾಗುತ್ತದೆ. ಕಬ್ಬು ಎತ್ತರಕ್ಕೆ ಬೆಳೆದು ಹೆಚ್ಚು ಕಾಲ ಜಮೀನಿನಲ್ಲಿರುವುದರಿಂದ ಆಳವಾದ ಉಳುಮೆ ಅತ್ಯಗತ್ಯ ಕಬ್ಬು ನೆಡುವ ಜಮೀನನ್ನು ಕಬ್ಬಿಣದ ನೇಗಿಲಿನಿಂದ ಅಥವಾ ಟ್ರಾಕ್ಟರ್ ಸಹಾಯದಿಂದ ಆಳವಾಗಿ ಉಳುಮೆ ಮಾಡಿ ರಂಟೆ ಹೊಡೆದು ಹೆಂಟೆಗಳಿದ್ದರೆ ಅವುಗಳನ್ನು ಪುಡಿ ಮಾಡಿ ಕಸಕಡ್ಡಿ ಆರಿಸಿ ಜಮೀನನ್ನು ಮಟ್ಟಮಾಡಿಟ್ಟುಕೊಳ್ಳಬೇಕು. ರಂಟೆ ಹೊಡೆಯುವ ಸಮಯದಲ್ಲಿ ಪ್ರತಿ ಹೆಕ್ಟೇರಿಗೆ 25 ಟನ್ ಚೆನ್ನಾಗಿ ಕಳಿತ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟನ್ನು ಮಣ್ಣಿನಲ್ಲಿ ಚೆನ್ನಾಗಿ ಬೆರೆಸಿರಬೇಕು. ತರುವಾಯ ರಿಡ್ಜರ್‌ನಿಂದ 90 ಸೆಂ.ಮೀ. ಅಂತರದಲ್ಲಿ ದೋಣಿ ಸಾಲು ಮಾಡಿ ಜಮೀನನ್ನು ಕಬ್ಬು ನೆಡಲು ಸಿದ್ಧವಾಗಿಟ್ಟುಕೊಳ್ಳಬೇಕು. ಸಾಲುಗಳ ನಡುವೆ ಅಂತರ ಕನಿಷ್ಠ 5 ರಿಂದ 6 ಅಡಿ ಇರಬೇಕು.

**ಅಂತರ ಬೆಳೆ:**

ಕಬ್ಬಿನಲ್ಲಿ ಅಂತರ ಬೆಳೆ ಬಹಳ ಅಪರೂಪ. ಕಾರಣ ಯಾವುದೇ ಮಿಶ್ರ ಬೆಳೆ ಬೆಳೆದರು, ಕಬ್ಬಿನ ಇಳುವರಿ ಕಡಿಮೆಯಾಗುವ ಸಂಭವ ಹೆಚ್ಚು. ಆದರೆ ಸಾಲುಗಳ ನಡುವೆ 5 ರಿಂದ 6 ಅಡಿ ಅಂತರವಿದ್ದಾಗ ಅಲ್ಪಾವದಿ ಬೆಳೆಗಳಾದ ಈರುಳ್ಳಿ, ಮೂಲಂಗಿ, ಅವರೆ, ಬೀನ್ಸ್, ಕೊತ್ತಂಬರಿ ಬೆಳೆಸಬಹುದು. ಧಾರವಾಡದ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕಬ್ಬು ಮತ್ತು ಸೋಯ ಅವರೆ ಮಿಶ್ರ ಬೆಳೆಯಾಗಿ ಬೆಳೆಸಿದಾಗ ಒಂದು ಅಚ್ಚರಿ ಸಂಗತಿಯೆಂದರೆ ಕಬ್ಬಿನ ಇಳುವರಿ ಹೆಚ್ಚಾಯಿತು. ಕಡಿಮೆ ಕಾಲಾವಧಿಯ ಸೋಯ ಅವರೆ 'ಮನೆಟ್ಟಾ' ತಳಿಯನ್ನು ಬೆಳೆಸಲಾಗಿತ್ತು. ಇದು ಕೇವಲ 80 ದಿವಸಗಳಲ್ಲಿ ಕೊಯ್ಲಿಗೆ ಬರುತ್ತದೆ. ಈ ಸೋಯಾ ಅವರೆಯನ್ನು ಎರಡು ಕಬ್ಬಿನ ಸಾಲುಗಳ ಮಧ್ಯೆ ಒಂದು ಸಾಲು ಬೀಜ ಬಿತ್ತಿದಾಗ ಇಳುವರಿ ಹೆಚ್ಚಾಗಿದ್ದು ಕಂಡುಬಂದಿತ್ತು. ಕಬ್ಬನ್ನು 8 ರಿಂದ 10 ಅಡಿ ಅಂತರದ ಸಾಲುಗಳಾಗಿ ಬೆಳೆದಾಗ ಮಧ್ಯೆ ನೀರಾವರಿ ಅನುಕೂಲವಿದ್ದು ತಾತ್ಕಾಲಿಕ Drip ಅಳವಡಿಸಿ ಇತ್ತೀಚೆಗೆ ಅಲ್ಪಾವದಿ ಬೆಳೆಗಳಾದ ಕಲ್ಲಂಗಡಿ ಹಾಗೂ ದೊಣ್ಣೆ ಮೆಣಸಿನ ಗಿಡ ಬೆಳೆಯುತ್ತಿದ್ದಾರೆ.

# ಅನಾವೃಷ್ಟಿಗೆ ಸೆಡ್ಡು, ಕಡು ಬೇಸಿಗೆಯಲ್ಲಿ ನಮ್ಮ ಕಬ್ಬು GOOD

ಡಾ.ಸಾಯಿಲ್ ಬಳಸಿದ ನಂತರ ಮಣ್ಣಿನಲ್ಲಿ ವ್ಯಾಮ್ ಶಿಲೀಂಧ್ರಗಳು ಅಭಿವೃದ್ಧಿಗೊಂಡು ಹೆಚ್ಚಿನ ಪ್ರಮಾಣದಲ್ಲಿ ಮಣ್ಣಿನಲ್ಲಿ ತೇವಾಂಶವನ್ನು ಹಿಡಿದಿಟ್ಟುಕೊಂಡು ಅನಾವೃಷ್ಟಿ (ಬರ) ಸಹಿಸುವ ಶಕ್ತಿಯನ್ನು ಪಡೆದುಕೊಂಡಿವೆ. ಹೀಗಾಗಿ ಕಬ್ಬಿಗೆ ನಿರಂತರವಾಗಿ ಪೋಷಕಾಂಶ ಹಾಗೂ ನೀರು ಸಿಗುತ್ತಿರುವುದರಿಂದ ಕಬ್ಬು ಬಿಸಿಲಿನಲ್ಲಿ ಬಾಡುವುದಿಲ್ಲ.

| ಮಹಾದೇವ ಶಿವಪ್ಪ ಜೋಡಟ್ಟಿ ಸವಸುದ್ದಿ

# ಇದು ನಿಮಗೆ ತಿಳಿದಿರಲಿ!!!

**ಸಾವಯವ ಕೃಷಿಯಲ್ಲಿ ಸಸ್ಯಗಳಿಗೆ ಹೆಚ್ಚಿನ ರೋಗಬಾದೆ ಇರುವುದಿಲ್ಲ...**

ಡಾ.ಸಾಯಿಲ್‌ನಿಂದ ಕಬ್ಬಿಗೆ ಸಾಕಷ್ಟು ಮುಖ್ಯ ಹಾಗೂ ಸೂಕ್ಷ್ಮ ಪೋಷಕಾಂಶಗಳು ಸಸ್ಯಕ್ಕೆ ಸಿಗುವುದರಿಂದ ಸಸ್ಯಕ್ಕೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಸಸ್ಯಗಳು ಪ್ರಾಕೃತಿಕವಾಗಿ ಸಸ್ಯ ರಾಸಾಯನಿಕಗಳಾದ ಟರ್ಪಿನಾಯಿಡ್‌ಗಳು, ಅಲ್ಕಲಾಯಿಡ್‌ಗಳು, ಫ್ಲೆವನಾಯಿಡ್‌ಗಳು, ಫಿನೋಲಿಕ್ಸ್ ಸಂಯುಕ್ತಗಳು ಮತ್ತು ಅಮೈನೋ ಆಮ್ಲಗಳು ಬಿಡುಗಡೆ ಹೊಂದಿ ಪೀಡೆ ವಿಕರ್ಷಣ ಶಕ್ತಿಯನ್ನು ಪಡೆಯುತ್ತವೆ. ಹಾಗಾಗಿ ಡಾ.ಸಾಯಿಲ್ ಸಾವಯವ ಕೃಷಿಯಲ್ಲಿ ಹೆಚ್ಚಿನ ಪೀಡೆ ಬಾದೆ ಇರುವುದಿಲ್ಲ.

ಕಲಿಯಿರಿ ಕಲಿಸಿರಿ

## ಬೀಜೋಪಚಾರ ಮತ್ತು ಬೀಜ ತಯಾರಿಕೆ ಹೇಗೆ?

ಕಬ್ಬನ್ನು ಬೀಜಕ್ಕೆ ಉಪಯೋಗಿಸುವಾಗ ಕೆಲವು ಪ್ರಮುಖ ವಿಷಯಗಳನ್ನು ಗಮನದಲ್ಲಿಡಬೇಕು. ಬೀಜಕ್ಕೆ ಉಪಯೋಗಿಸುವ ಕಬ್ಬನ್ನು ಮೊದಲನೇ ಬೆಳೆಯಿಂದ ಆರಿಸಬೇಕು ಮತ್ತು ರೋಗಮುಕ್ತವಾಗಿರಬೇಕು. ಹುಲಸಾಗಿ ಬೆಳೆದ 8–10 ತಿಂಗಳ ಅವಧಿಯ ಕಬ್ಬನ್ನು ಬಳಸುವುದು ಶ್ರೇಷ್ಠ. ಕಾರಣ ಈ ಕಬ್ಬಿನಲ್ಲಿ ಗ್ಲೂಕೋಸ್ ಅಂಶ ಹೆಚ್ಚಿರುವುದರಿಂದ ಹುಟ್ಟುವಳಿ ಉತ್ತಮವಾಗಿರುತ್ತದೆ. ಕೆಲವು ರೈತರು ಕಬ್ಬಿನ ಮೇಲುಭಾಗವನ್ನು ಬೀಜಕ್ಕೆ ಉಪಯೋಗಿಸಿ ಕೆಳಭಾಗದ ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಕೊಡುತ್ತಾರೆ. ಇದೊಂದು ಲಾಭದಾಯಕ ಕ್ರಮ. ಕಾರಣ ಕಬ್ಬಿನ ಮೇಲ್ಭಾಗದಲ್ಲಿ ಗ್ಲೂಕೋಸ್ ಅಂಶ ಹೆಚ್ಚಿದ್ದು ಕೆಳಭಾಗದಲ್ಲಿ ಸಕ್ಕರೆ ಅಂಶ ಹೆಚ್ಚಿರುತ್ತದೆ. ಇದರಿಂದ ಸಕ್ಕರೆ ಕಾರ್ಖಾನೆಗಳಿಗೂ ಲಾಭ ರೈತರಿಗೂ ಅನುಕೂಲ. ಬೀಜಕ್ಕೆ ಉಪಯೋಗಿಸುವ ಕಬ್ಬನ್ನು ಮೂರು ಗಣ್ಣಿಗೆ ಒಂದೊಂದರಂತೆ ಚೂಪಾದ ಮಚ್ಚಿನಿಂದ ಕತ್ತರಿಸಬೇಕು. ಕತ್ತರಿಸಿದ ಕಬ್ಬಿನ ಬೀಜದ ತುಂಡುಗಳನ್ನು 200 ಲೀ. ನೀರಿಗೆ 5 ಲೀ. Dr. Soil ಹಾಕಿದ ದ್ರಾವಣದಲ್ಲಿ ಅದ್ದಿ ತೆಗೆದು ನೆರಳಿನಲ್ಲಿ ರಾಶಿ ಹಾಕಿ ನಂತರ ನೆಡಬೇಕು. Dr. Soil ನಲ್ಲಿ ಉಪಚರಿಸುವುದರಿಂದ ರೋಗಗಳ ಹತೋಟಿ ಸಾಧ್ಯ ಮತ್ತು ಮೊಳಕೆ ಪ್ರಮಾಣ ಹೆಚ್ಚಾಗುತ್ತದೆ.



## ಕಬ್ಬಿನ ಮರಿಗಳು ಸದೃಢ ಹಾಗೂ ಆರೋಗ್ಯವಾಗಿರಲು ಕಾರಣವೇನು?

ಕಬ್ಬಿಗೆ Dr. Soil ದ್ರವರೂಪದ ಸಾವಯವ ಗೊಬ್ಬರ ನೀಡಿದಾಗ ಮಣ್ಣು ಮೃದುವಾಗಿ ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಗಳು ಕ್ರಿಯಾಶೀಲವಾಗಿ ಮಣ್ಣಿನಲ್ಲಿ ಫಲವತ್ತತೆ ಅಭಿವೃದ್ಧಿಗೊಂಡು ಬೇರು ಸಮೂಹ ಆರೋಗ್ಯವಾಗಿ ಅಭಿವೃದ್ಧಿ ಹೊಂದಿರುವುದರಿಂದ ಕಬ್ಬಿನ ಮರಿಗಳು ಹೆಚ್ಚಿಗೆ ಬಂದಿವೆ. ಬಂದ ಮರಿಗಳು ಆರೋಗ್ಯ ಹಾಗೂ ಸದೃಢವಾಗಿದೆ ಮತ್ತು ವೇಗವಾಗಿ ಬೆಳೆಯುತ್ತಿವೆ. Dr. Soil ಸಾವಯವ ಕೃಷಿಯಲ್ಲಿ ಕಬ್ಬಿಗೆ ಬೇಕಾದ ಎಲ್ಲ ಬಗೆಯ ಮುಖ್ಯ ಹಾಗೂ ಲಘು ಪೋಷಕಾಂಶಗಳು ಸಿಗುತ್ತಿರುವುದರಿಂದ ಕಬ್ಬು ಸರ್ವತೋಮುಖವಾಗಿ ಅಭಿವೃದ್ಧಿಯಾಗುತ್ತದೆ.

# ಹುಲ್ಲುನಾಚೇಗೌಡರು ನಮಗೆ ಒಕ್ಕಲುತನದ ದೇವರಾಗಿ ಬಂದಿದ್ದಾರೆ

ದೇಸಾಯಿಸರ್ ಎಂದು ಪ್ರಖ್ಯಾತರಾದ ಈರಪ್ಪ ಸತ್ಯಪ್ಪ ದೇಸಾಯಿ ನಿವೃತ್ತ ಶಿಕ್ಷಕರು, ಒಕ್ಕಲುತನ ಇವರ ಪ್ರೀತಿಯ ಒಡನಾಡಿ ಕೃಷಿಯಲ್ಲಿನ ವಿನೂತನ ಪ್ರಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಾಹಸಿ ಕೃಷಿಕ ಎಂದರೆ ತಪ್ಪಾಗಲಾರದು. 22 ಎಕರೆ ಕೃಷಿ ಹೊಂದಿರುವ ಇವರು ಪ್ರತಿ ವರ್ಷ 18 ಎಕರೆ ಕಬ್ಬು, ಮೂರು ಎಕರೆ ಬಾಳೆ, ಒಂದೂವರೆ ಎಕರೆ ಅರಿಶಿಣ ಬೆಳೆಯುತ್ತಿದ್ದಾರೆ. ರಾಸಾಯನಿಕ ಕೃಷಿಯ ಎಲ್ಲ ಪ್ರಯೋಗಗಳನ್ನು ಬಲ್ಲ ಇವರು 30–35 ವರ್ಷಗಳು ಕೃಷಿ ಅನುಭವ ಹೊಂದಿದ್ದಾರೆ. ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿರುವ ಇವರು ಒಬ್ಬ ವಿದ್ಯಾರ್ಥಿಯ ಹಾಗೆ ಸಾವಯವ ಕೃಷಿ ಶಿಕ್ಷಣದ ತರಬೇತಿಗೆ ಹಾಜರಾಗಿ ಸಾವಯವ **ಕೃಷಿ ತಜ್ಞರಾದ ಹುಲ್ಲುನಾಚೇಗೌಡರ** ಸಾವಯವ ಕೃಷಿ ಕ್ರಾಂತಿ ಗೀತೆಯನ್ನು ಹಾಡೋಣ ಎಂದು ನಿರ್ಧರಿಸಿ ಇಡೀ ತಮ್ಮ ಪೂರ್ಣ ಜಮೀನಿಗೆ ಒಮ್ಮೆಗೆ Dr. Soil ಹಾಕಿ ಸಾವಯವ ಕೃಷಿ ಪದ್ಧತಿಗೆ ಬದಲಾದರು. ಆ ದಿಟ್ಟ ನಿರ್ಧಾರದಿಂದ ಇಂದು ಅವರು ಆತ್ಮವಿಶ್ವಾಸದಿಂದ ಕೃಷಿ ಮಾಡುತ್ತಿದ್ದಾರೆ. **ಶ್ರೀಯುತ ದೇಸಾಯಿ** ಸರ್‌ರವರಿಗೆ ನಾವು ಕೆಲವು ಪ್ರಶ್ನೆಗಳನ್ನು ಕೇಳಿದಾಗ ಅವರ ಮಾತುಗಳು ಹೀಗಿತ್ತು...

ಸಂದರ್ಶನ



## ಕಟಕಬಾವಿ ಭಗೀರಥನ ಅಂತರಾಳದ ಮಾತು

**ಪ್ರಶ್ನೆ: ಸರ್ Dr. Soil ಕಬ್ಬಿಗೆ ನೀವು ನೀಡಿ ಎಷ್ಟು ದಿನಗಳಾಯ್ತು?**
ಉತ್ತರ: ಕಬ್ಬಿಗೆ ಈಗ 2 ತಿಂಗಳು Dr. Soil ಹಾಕಿ ಒಂದೂವರೆ ತಿಂಗಳಾಯಿತು.

**ಪ್ರಶ್ನೆ: ಸರ್ ನೀವು ಒಮ್ಮೆಗೆ Dr. Soil ಸಾವಯವ ಕೃಷಿಗೆ ಬದಲಾಗಲು ಕಾರಣವೇನು?**
ಉತ್ತರ: ಹೆಚ್.ಎನ್.ಗೌಡರು ನಾವು ಎಂದೂ ಕೇಳಿರದ ಸಾವಯವ ಕೃಷಿ ಸತ್ಯಗಳನ್ನು ತಿಳಿಸಿದರು. ಜೊತೆಗೆ ಶಿವಪ್ಪ ಜೋಡಟ್ಟಿರವರ ಕಬ್ಬಿನ ಗದ್ದೆಯನ್ನು ಸೂಕ್ಷ್ಮವಾಗಿ ಗಮನಿಸಿದೆ. ನನಗೆ ಶೇ.100 ನಂಬಿಕೆ ಬಂತು. ನಾನು ಸಾವಯವ ಕೃಷಿಗೆ ಬದಲಾದೆ.

**ಪ್ರಶ್ನೆ: ಕಬ್ಬಿನ ಬೆಳೆಯಲ್ಲಿ ನೀವು Dr. Soil ಬಳಸಿದ ನಂತರ ಆದ ಬದಲಾವಣೆಗಳೇನು?**
ಉತ್ತರ: ಮರಿಗಳ ಸಂಖ್ಯೆ ಹೆಚ್ಚಾಯಿತು. ಮರಿಗಳು ಸದೃಢವಾಗಿವೆ. ವೇಗವಾಗಿ ಬೆಳೆ ಬೆಳೆಯುತ್ತಿದೆ. ದಳಗಳು ದಟ್ಟವಾಗಿ ಮತ್ತು ಆರೋಗ್ಯವಾಗಿವೆ. ತಾಜಾ ತಿಳಿ ಹಸಿರಿನಿಂದ ತೋಟ ಕಂಗೊಳಿಸುತ್ತಿದೆ. ಒಟ್ಟಿನಲ್ಲಿ ಆರೋಗ್ಯಪೂರ್ಣವಾದ ಬೆಳೆ.

**ಪ್ರಶ್ನೆ: Dr. Soil ಬಳಸಿದ ನಂತರ ಮಣ್ಣಿನಲ್ಲಿ ಆದ ಬದಲಾವಣೆಗಳೇನು?**
ಉತ್ತರ: Dr. Soil ಬಳಸಿದ ನಂತರ ಮಣ್ಣು ಮೃದುವಾಗಿದೆ. ಮಣ್ಣು, ತೇವಾಂಶ ಹಿಡಿದುಕೊಳ್ಳುತ್ತಿದೆ. ಎರೆಹುಳುಗಳು ಬಂದಿವೆ. ಬೇರಿನ ಉಸಿರಾಟಕ್ಕೆ ಉಪಯುಕ್ತವಾದ ಮಣ್ಣಿನ ನಿರ್ಮಾಣವಾಗುತ್ತಿದೆ.

**ಪ್ರಶ್ನೆ: Dr. Soil ಬಳಸಿದ ನಂತರ ಬೇರೆ ಯಾವುದಾದರೂ ಕೃಷಿ ಪರಿಕರಗಳನ್ನು ಬಳಸಿದ್ದೀರಾ?**
ಉತ್ತರ: ಯಾವುದೇ ಪರಿಕರ ಬಳಸಿಲ್ಲ, ಕೀಟನಾಶಕ ಸಹ ಸಿಂಪರಣೆ ಮಾಡಿಲ್ಲ, ಸಿಂಪರಣೆ ಯಂತ್ರ ಕೆಲಸವಿಲ್ಲದೆ ಸುಮ್ಮನೆ ಬಿದ್ದಿದೆ.

**ಪ್ರಶ್ನೆ: ನೀವು ರವದಿಯನ್ನು ಸುಡುತ್ತೀರಾ?**
ಉತ್ತರ: ನಾವು ಎಂದೂ ರವದಿ ಸುಡುವುದಿಲ್ಲ. ರವದಿಯು ಸಾವಯವ ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಎರೆಹುಳುಗಳಿಗೆ ಒಳ್ಳೆಯ ಆಹಾರ ರವದಿ. ಉತ್ತಮ ಹೊದಿಕೆಯಾಗಿ ತೇವಾಂಶ ಕಾಪಾಡಿಕೊಳ್ಳುತ್ತದೆ.

**ಪ್ರಶ್ನೆ: ಎರೆಹುಳುಗಳಿಂದ ಏನು ಪ್ರಯೋಜನ?**
ಉತ್ತರ ಎರೆಹುಳು ರೈತನ ಮಿತ್ರ ಎರೆಹುಳುವಿನ ಹಿಕ್ಕೆಯಲ್ಲಿ ಸಾವಯವ N.P.K ಹಾಗೂ ಸಸ್ಯಕ್ಕೆ ಬೇಕಾದ ಎಲ್ಲ ಬಗೆಯ ಪೋಷಕಾಂಶಗಳು ಸಿಗುತ್ತದೆ.

**ಪ್ರಶ್ನೆ: Dr. Soil ಕೃಷಿಯಲ್ಲಿ ನೀರಿನ ನಿರ್ವಹಣೆ ಬಗ್ಗೆ ನಿಮ್ಮ ಅಭಿಪ್ರಾಯವೇನು?**
ಉತ್ತರ: ನೋಡಿ Dr. Soil ಬಳಸಿದ ಮೇಲೆ ನೀರಿನ ನಿರ್ವಹಣೆ ಬಹಳ ಸುಲಭವಾಗಿದೆ. 15 ದಿನಕ್ಕೆ ಒಮ್ಮೆ ನೀರು ಕೊಡುತ್ತಿದ್ದೇನೆ. ಪ್ರತಿವರ್ಷ ಬೇಸಿಗೆಯಲ್ಲಿ ಜನರೇಟರ್‌ಗೆ ಬಹಳ ಕೆಲಸ ಇರ್‍ತಾ ಇತ್ತು. ಈ ಸಾರಿ ನಮ್ಮ ಜನರೇಟರ್‌ಗೆ ಕೆಲಸವೇ ಇಲ್ಲ.

**ಪ್ರಶ್ನೆ: Dr. Soil ಕೃಷಿಯಲ್ಲಿ ಕೂಲಿಕಾರ್ಮಿಕರ ನಿರ್ವಹಣೆ ಹೇಗೆ?**
ಉತ್ತರ: ರಾಸಾಯನಿಕ ಗೊಬ್ಬರ ಹಾಕುವುದಕ್ಕೆ ಕೂಲಿ ಕಾರ್ಮಿಕರು ಬೇಕು. Dr. Soil ನನ್ನ ಮಗ ಒಬ್ಬ ಇಡೀ 18 ಎಕರೆಗೆ 3–4 ತಾಸಿನಲ್ಲಿ Drip ಮೂಲಕ ಬಿಟ್ಟಿದ್ದಾನೆ. ಕೆಲಸ ಬಹಳ ಸುಲಭವಾಗಿದೆ.

**ಪ್ರಶ್ನೆ: Dr. Soil ಕೃಷಿಯಲ್ಲಿ ಖರ್ಚಿನ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?**
ಉತ್ತರ: ನಾವು ಎಕರೆಗೆ 50 ಲೀಟರ್ Dr. Soil ಬಳಸಿದ್ದೇವೆ. ಬೆಳೆ ಚೆನ್ನಾಗಿದೆ. ಎಕರೆಗೆ 10–15 ಸಾವಿರ ಖರ್ಚು ಆಗಬಹುದು. ರಾಸಾಯನಿಕ ಕೃಷಿಗಿಂತ ಖರ್ಚಿನಲ್ಲಿ ಬಹಳ ಕಡಿಮೆ.

**ಪ್ರಶ್ನೆ: ಇಳುವರಿ ಹಾಗೂ Recovery ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?**
ಉತ್ತರ: ಈಗ ಬೆಳೆ ಇರುವ ಪರಿ ನೋಡಿದರೆ ಯಾರು ಬೇಕಾದರೂ ಹೇಳುತ್ತಾರೆ. ಒಳ್ಳೆಯ ಇಳುವರಿ ಬರುತ್ತದೆ ಎಂದು. ನನ್ನ ಅಂದಾಜಿನಂತೆ 12 ತಿಂಗಳಲ್ಲಿ 60 ರಿಂದ 80 ಟನ್ ತನಕ ಇಳುವರಿ ಬರಬಹುದು. ಬೆಳೆ ಸದೃಢವಾಗಿದೆ. ಸಹಜವಾಗಿ Recovery ಚೆನ್ನಾಗಿ ಬರುತ್ತದೆ.

**ಪ್ರಶ್ನೆ: ಕೃಷಿ ಕ್ರಾಂತಿ ಪತ್ರಿಕೆಯ ಮೂಲಕ ರೈತರಿಗೆ ನಿಮ್ಮ ಸಂದೇಶವೇನು?**
ಉತ್ತರ: Dr. Soil ಒಂದು ವರದಾನ ಕಬ್ಬು ಬೆಳೆಗಾರರು ಇದರ ಸದುಪಯೋಗ ಪಡೆದುಕೊಳ್ಳಲಿ ಎಂಬುದು ನನ್ನ ಆಶಯ.

**ಪ್ರಶ್ನೆ: Dr. Soil ಕೃಷಿಯಲ್ಲಿ ನಿಮಗೆ ತೃಪ್ತಿ ಇದೆಯೇ?**
ಶೇ.100 ತೃಪ್ತಿ ಇದೆ. ನಮ್ಮ ಒಕ್ಕಲುತನದ ದೇವರಾಗಿ ಬಂದಿರುವ ಹುಲ್ಲುನಾಚೇಗೌಡರಿಗೆ ನನ್ನ ಹೃದಯಪೂರ್ವಕ ಅಭಿನಂದನೆಗಳು, ಲಕ್ಷಾಂತರ ರೈತರ ಬಾಳಲ್ಲಿ ಕೃಷಿ ದೇವರಾಗಿ ಬೆಳಕು ನೀಡಲಿ ಎಂಬುದು ನನ್ನ ಶುಭ ಹಾರೈಕೆ.

# ಸವಳು ನಿವಾರಣೆಯಾಗಿದೆ ದಳಗಳು ಮೃದುವಾಗಿವೆ, ಕೊಯ್ಯಂಗಿಲ್ಲ

| ರಾವ್‌ಸಾಬ್ ನಿಂಗಪ್ಪ ಬುಗಡೆ, ಇಂಗಳ, ಚಿಕ್ಕೋಡಿ. ತಾ. ಬೆಳಗಾವಿ ಜಿಲ್ಲೆ.

ದಿನಾಂಕ 12–04–2014ರಂದು ನಮ್ಮ ಕೃಷಿ ಗುರುಗಳಾದ ಶ್ರೀ ಕೆ.ಆರ್. ಹುಲ್ಲುನಾಚೇಗೌಡರ ಮಾರ್ಗದರ್ಶನದಲ್ಲಿ ನಾನು Dr. Soil ಸಾವಯವ ಕೃಷಿ ಮಾಡಲು ಪ್ರಾರಂಭಿಸಿದೆ. ಅವರ ಮಾರ್ಗದರ್ಶನದಂತೆ ಎಕರೆಗೆ 50 ಲೀಟರ್ Dr. Soil ನೀಡಿದೆ. ಕೇವಲ 15 ದಿನದಲ್ಲಿ ಮಣ್ಣು ಮೃದುವಾಯಿತು. ಒಂದು ತಿಂಗಳಿನಿಂದ ನೀರು ಕೊಟ್ಟಿಲ್ಲ. ಆದರೂ ಬೆಳೆ ಬಾಡಿಲ್ಲ, ತಾಜಾ ಹೊಳಪಿನಿಂದ ಕೂಡಿದೆ ಸವಳು ನಿವಾರಣೆಯಾಗಿದೆ. ದಳಗಳು ಮೃದುವಾಗಿದ್ದು, ಕೊಯ್ಯಂಗಿಲ್ಲ. ಈ ಹಿಂದೆ ಎಷ್ಟೆಲ್ಲಾ ಪ್ರಯತ್ನ ಮಾಡಿದರೂ ಸವಳು ಕಡಿಮೆಯಾಗಿಲ್ಲ. ಈಗ Dr. Soil ನೀಡಿದ ಮೇಲೆ ಸವಳು ನಿವಾರಣೆ ಆಗಿದೆ. ಮರಿಗಳು ಸದೃಢವಾಗಿ ಎಲ್ಲ ಒಂದೇ ಎತ್ತರ ಗಾತ್ರ ಹಾಗೂ ಆರೋಗ್ಯವಾಗಿ ಬೆಳೆದಿವೆ. ಈ ಮುಂಚೆ ಸುಳಿ ರೋಗ ಬಹಳ ದೊಡ್ಡ ಸಮಸ್ಯೆ ಇತ್ತು. Dr. Soil ಬಳಸಿದ ಮೇಲೆ ಈಗ ಆ ಸಮಸ್ಯೆ ಇಲ್ಲ. ಹೊಸ ಬೇರಿನ ಅಭಿವೃದ್ಧಿಯಾಗಿದೆ. ಬೇರುಗಳು ಬಹಳ ಬಿಳುಪಾಗಿದೆ. ಈ ಹಿಂದೆ ರಾಸಾಯನಿಕ ಕೃಷಿಯಲ್ಲಿ ಹೀಗೆ ಇರುತ್ತಿರಲಿಲ್ಲ. ಈಗಾಗಲೇ ನಮ್ಮ ಮಣ್ಣಿನಲ್ಲಿ ಇಳುವರಿ ಕುಸಿದಿದೆ. 30 ರಿಂದ 40 ಟನ್ ಮಾತ್ರ ಇಳುವರಿ ಬರುತ್ತದೆ. ಈಗ Dr. Soil ಹೊಸ ಪ್ರಯೋಗ ಮಾಡಿದಾಗ ಇಳುವರಿ ಹೆಚ್ಚಾಗುವ ಒಂದು ಆಶಾಭಾವನೆ ಬಂದಿದೆ. ಕಡಿಮೆ ಖರ್ಚು ಹೆಚ್ಚು ಆದಾಯ ಪಡೆಯಬಹುದು ಎಂಬುದು ಖಾತ್ರಿಯಾಗಿದೆ. ನನ್ನ 3 ಎಕರೆ ಪೂರ್ತಿ ಕಬ್ಬಿನ ಬೆಳೆಗೆ ನಾನು Dr. Soil ಬಳಸಿದ್ದೇನೆ. ಬಹಳ ತೃಪ್ತಿ ಇದೆ. ಬೆಳೆ ಬಹಳ ಚೆನ್ನಾಗಿದೆ. ಎಲ್ಲ ರೈತರು Dr. Soil ಬಳಸಿ ಕೃಷಿಯಲ್ಲಿ ಯಶಸ್ಸು ಸಿಗಲಿ ಎಂದು ಆಶಿಸುತ್ತೇನೆ.



# ಮೊಲಾಸಿಸ್ ಮಲಿನದ ನೀರು ಸಂಕಷ್ಟದಿಂದ ಪಾರಾಗಲು Dr. Soil ಹೊಸ ಆಶಾಕಿರಣವಾಗಿದೆ

**ಅಭಿನಂದನ್ ಅಜಿತ್ ಮುನ್ನೋಳಿ ಬೆಲ್ಲದ ಬಾಗೇವಾಡಿ, ಹುಕ್ಕೇರಿ ತಾ.**

ನಮ್ಮ ಜಮೀನು ಪಕ್ಕದಲ್ಲೆ ಸಕ್ಕರೆ ಕಾರ್ಖಾನೆ ಇದೆ. ಕಾರ್ಖಾನೆಯಿಂದ ಹೊರಬಿಡುವ ಮೊಲಾಸಿಸ್ ತ್ಯಾಜ್ಯ ಅಂತರ್ಜಲ ಸೇರಿ ನಮ್ಮ ಕೃಷಿಯಲ್ಲಿ ಸಾಕಷ್ಟು ಸಮಸ್ಯೆಗಳಿಗೆ ಕಾರಣವಾಗಿತ್ತು. ನಾವು ಏಳು ವರ್ಷದಿಂದ ಸಾವಯವ ಕೃಷಿ ಮಾಡ್ತಾ ಇದ್ದೀವಿ. ನಮ್ಮ ಭೂಮಿಯಲ್ಲಿ ಎರೆಹುಳು ಇದೆ. ಆದರೆ ನಮ್ಮ ಭೂಮಿಯಲ್ಲಿ ಮೇಲ್ಪದರದಲ್ಲಿ ರವದಿಯನ್ನು ತಿಂದು ಹಿಕ್ಕೆ ಹಾಕ್ತಾ ಇವೆ. ಭೂಮಿ ಬಹಳ ಗಟ್ಟಿಯಾಗಿರುವುದರಿಂದ ಎರೆಹುಳು ಭೂಮಿಯ ಒಳಗೆ ಹೋಗ್ತಾ ಇಲ್ಲ. ನಾವು Dr. Soil ಬಳಸಿದ ನಂತರ ಕಬ್ಬು ಬಹಳ ಚೆನ್ನಾಗಿ ಬೆಳೆದಿದೆ. ಈಗ ಇರುವ ಕೂಳೆ ಬೆಳೆ ನಾಲ್ಕನೆ ಕೂಳೆ ಬೆಳೆ ಲವಣಿ ಮಾಡಿದ ಮೊದಲನೇ ಬೆಳೆಗಿಂತ ಈ ಬೆಳೆ ಬಹಳ ಚೆನ್ನಾಗಿದೆ Dr. Soil ಬಳಸಿ ಎರಡೂವರೆ ತಿಂಗಳಾಯಿತು. ಒಂದು ಮಳೆಯಾಗಿದೆ. ಅದು ಬಿಟ್ಟರೆ ನಾವು ನೀರು ಕೊಟ್ಟಿಲ್ಲ. ಆದರೂ ಬೆಳೆ ಬಹಳ ಚೆನ್ನಾಗಿದೆ. ಮರಿಗಳು ಸಮನಾಗಿ ಸದೃಢವಾಗಿ ಬಂದಿವೆ. ಯಾವುದೇ ರೋಗ ಇಲ್ಲ. ಬೆಳವಣಿಗೆ ವೇಗವಾಗಿ ಆಗ್ತಾ ಇದೆ. ರವದಿ ಕರಗಿ ಹೋಗ್ತಾ ಇದೆ. ನಾವು ಎಕರೆಗೆ 50 ಲೀಟರ್ Dr. Soil ಬಳಸಿದ್ದೇವೆ.



ಬೆಳೆಯಲ್ಲಿ ಯಾವುದೇ ಕೊರತೆ ಕಾಣಿಸ್ತಾ ಇಲ್ಲ. ಉತ್ತಮ ಇಳುವರಿ ನಿರೀಕ್ಷೆ ಇದೆ. Dr. Soil ಬಳಸದೆ ಇರುವ ಕಬ್ಬಿನ ಗದ್ದೆಗೂ ಬಳಸಿರುವ ಗದ್ದೆಗೂ ಅಜಗಜಾಂತರ ವ್ಯತ್ಯಾಸವಿದೆ. ಬಾಳೆ ತೋಟಕ್ಕೂ ನಾವು Dr. Soil ಬಳಸಿದ್ದೇವೆ. Dr. Soil ಬಳಸುವುದಕ್ಕಿಂತ ಮುಂಚೆ ಬಾಳೆ ಬೆಳೆ ಪೂರ್ತಿ ಹಾಳಾಗಿತ್ತು. ನಮಗೆ ಬೆಳೆ ಮೇಲೆ ನಿರೀಕ್ಷೆ ಇರಲಿಲ್ಲ. Dr. Soil ಬಳಸಿದ ನಂತರ ಬಾಳೆ ಬಹಳ ತಾಜಾ ಆಗಿದೆ. ಕಾಂಡ, ಎಲೆಗಳು ಆರೋಗ್ಯವಾಗಿವೆ. ಉತ್ತಮ ಬೆಳವಣಿಗೆ ಆಗಿದೆ. ನಮ್ಮ ಕೃಷಿಯಲ್ಲಿನ ಮೊಲಾಸಿಸ್ ಮಲಿನದ ನೀರಿನ ಅನಿವಾರ್ಯ ಬಳಕೆಯಿಂದಲೂ ನಮ್ಮ ಬೆಳೆಗಳಲ್ಲಿ ಉತ್ತಮ ಇಳುವರಿ ನಿರೀಕ್ಷೆ ಇದೆ. ನಮಗೆ Dr. Soil ಹೊಸ ಆಶಾಕಿರಣವಾಗಿದೆ.

## ಕಲಿಯಿರಿ ಕಲಿಸಿರಿ

### ರವದಿ ಸುಡುವುದು ಮಹಾ ಪಾಪ

ಈ ಭೂಮಿಯ ಮೇಲೆ ಇರುವ ಪ್ರತಿಯೊಂದು ಜೀವಿಗೂ ಜೀವಿಸುವ ಹಕ್ಕು ಇದೆ.

ವರ್ಷ ಪೂರ್ತಿ ನಾವು ನಮಗಾಗಿ ಬೆಳೆದ ಜೋಳ, ರಾಗಿ, ಗೋಧಿ, ಭತ್ತ ಇವುಗಳನ್ನು ಯಾರಾದರು ಸುಟ್ಟರೆ ನೀವು ಅವರನ್ನು ಏನೆಂದು ಕರೆಯುತ್ತೀರಿ. ನೂರಾರು ಜನರು ತಿನ್ನುವ ಆಹಾರ ಧಾನ್ಯವನ್ನು ಸುಟ್ಟ ಮಹಾಪಾಪಿ ಎನ್ನುವುದಿಲ್ಲವೇ? ಹಾಗಾದರೆ, ಸಸ್ಯ ತನ್ನ ಆಹಾರಕ್ಕಾಗಿ ತನ್ನ ಜೈವಿಕ ಪರಿಸರದ ಕೋಟ್ಯಾನುಕೋಟಿ ಮಣ್ಣು ಜೀವಿಗಳ ಆಹಾರಕ್ಕಾಗಿ ತಾನೇ ತಯಾರಿಸಿಕೊಂಡ ತರಗು, ರವದಿಗಳನ್ನು ಸುಡುವುದು ಮಹಾ ಪಾಪವಲ್ಲವೆ?

ರವದಿ ಅತ್ಯಮೂಲ್ಯ ಸಂಪತ್ತು ನಿರಂತರ ಪೋಷಕಾಂಶಗಳನ್ನು ಒದಗಿಸುವುದು ಬಹಳ ಸುಲಭವಾಗುತ್ತದೆ. ರವದಿಯನ್ನು ಕಬ್ಬಿನ ಗದ್ದೆಯಲ್ಲಿ ಹೊದಿಕೆಯಾಕಿದರೆ ಮಣ್ಣಿನಲ್ಲಿ ಸೂಕ್ಷ್ಮಾಣುಜೀವಿಗಳ ಚಟುವಟಿಕೆ ಅಭಿವೃದ್ಧಿಗೊಂಡು ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ರವದಿ ದಿನ ಕಳೆದಂತೆ ಕರಗಿ ಮಣ್ಣುಜೀವಿಗಳಿಗೆ ಆಹಾರವಾಗುತ್ತದೆ. ಎರೆಹುಳುಗಳು ರವದಿಯನ್ನು ತಿಂದು ಹಿಕ್ಕೆ ಹಾಕುತ್ತವೆ. ನಿಮ್ಮ ಕಬ್ಬಿನಗದ್ದೆಯಲ್ಲಿ ಎರೆಗೊಬ್ಬರದ ಕಾರ್ಖಾನೆ ತಯಾರಾಗುತ್ತದೆ. ಆದರೆ ನೀವು ರವದಿ ಕರಗುತ್ತಿಲ್ಲ ಎಂದು ನೆಪ ಹೇಳಿ ಸುಟ್ಟುಬಿಡುತ್ತೀರಿ. ಹೀಗೆ ಮಾಡಿದರೆ ನಿಮಗೆ ಬಲು ದೊಡ್ಡ ನಷ್ಟ ರವದಿ ಸುಲಭವಾಗಿ ಕರಗಲು Dr. Soil ಸಾವಯವ ಕೃಷಿ ಮಾಡಿ Dr. Soil ಬಳಸಿದರೆ ರವದಿ ವೇಗವಗಿ ಕರಗಿ ಮಣ್ಣಿನಲ್ಲಿ ಬೆರೆತು ಕಬ್ಬಿಗೆ ಉತ್ತಮ ಪೋಷಕಾಂಶಗಳನ್ನು ಒದಗಿಸುತ್ತದೆ.

**ಇದು ನಿಮಗೆ ತಿಳಿದಿರಲಿ**

Dr. Soil ನಲ್ಲಿ ಗೆದ್ದಲು ನಿವಾರಕ ಸೂಕ್ಷ್ಮಾಣುಜೀವಿಗಳು ಇರುವುದರಿಂದ ರವದಿಯನ್ನು ಗೆದ್ದಲು ತಿನ್ನಲಾಗದು. ರವದಿ ಪೂರ್ಣವಾಗಿ ಸೂಕ್ಷ್ಮಾಣುಜೀವಿಗಳು ಹಾಗೂ ಎರೆಹುಳುಗಳಿಗೆ ಆಹಾರವಾಗಿ ಬಳಕೆಯಾಗುತ್ತದೆ. ರವದಿ ಬೇಗ ಕಾಂಪೋಸ್ಟ್ ಆಗುತ್ತದೆ.

**ಓದಿದ್ದು ರಾಸಾಯನಿಕ ಕೃಷಿ ಮಾಡುತ್ತಿರುವುದು ಸಾವಯವ ಕೃಷಿ**



# ಮೂರು ತಿಂಗಳಲ್ಲಿ 4–5 ಗಣಿಕೆ ಬಂದಿದೆ

**ಸಿದ್ದಾರೂಢ ಕೆಂಚಪ್ಪ ಸಿಂಗಾಡಿ ಎಂ.ಎಸ್‌ಸಿ., ಕೃಷಿ, ಸಹ ಸಂಶೋಧಕ, ಸಾವಯವ ಬೆಲ್ಲ ತಂತ್ರಜ್ಞಾನ ಸಂಸ್ಥೆ ಮುಧೋಳ. ಜಮಖಂಡಿ ತಾ, ಬಾಗಲಕೋಟೆ ಜಿಲ್ಲೆ.**

ನಾನು ಶ್ರೀ ಕೆ.ಆರ್. ಹುಲ್ಲುನಾಚೇಗೌಡರು ನಡೆಸಿಕೊಟ್ಟ ಸಾವಯವ ಕೃಷಿಯಲ್ಲಿ ಕಬ್ಬು ಬೆಳೆಯುವ ತಂತ್ರಜ್ಞಾನದ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಕ್ಕೆ ಹಾಜರಾದೆ. ಸಾವಯವ ಕೃಷಿ ವಿಜ್ಞಾನದ ಸಾಕಷ್ಟು ಕೃಷಿ ಸತ್ಯಗಳನ್ನು ಅವರು ತಿಳಿಸಿದರು. ಪ್ರಕೃತಿ, ವಾತಾವರಣ, ಮಣ್ಣು, ನೀರು ಗೊಬ್ಬರ, ಪದ್ಧತಿಗಳು ಒಂದು ಯಶಸ್ವಿ ಕೃಷಿಯ ಗುಟ್ಟು ಎಂದು ಹೇಳಿದರು. 20–30 ವರ್ಷಗಳಿಂದ ರಾಸಾಯನಿಕ ಕೃಷಿ ಮಾಡಿ ನಮ್ಮ ಮಣ್ಣು ಜೀವ ಕಳೆದುಕೊಂಡಿದೆ. ಇಂತಹ ನಿರ್ಜೀವ ಮಣ್ಣಿಗೆ ಮತ್ತೆ ಮರುಜೀವ ತುಂಬಿ ಮೊದಲನೇ ಬೆಳೆಯಿಂದಲೇ ಯಶಸ್ವಿ ಬೆಳೆ ಪಡೆಯಲು Dr. Soil ದ್ರವರೂಪದ ಸಾವಯವ ಗೊಬ್ಬರದ ಮಹತ್ವವನ್ನು ತಿಳಿಸಿದರು. ಕೃಷಿ ಪದವೀಧರನಾದ ನಾನು ಅವರ ವೈಜ್ಞಾನಿಕ ಚಿಂತನೆಗಳಿಂದ ಪ್ರೇರಿತನಾಗಿ ನನ್ನ ಸ್ವಂತ ಕಬ್ಬಿನ ಗದ್ದೆಗೆ Dr. Soil ಹಾಕಿದೆ. Dr. Soil ಹಾಕುವಾಗ ನನ್ನ ಸ್ವಂತ ಪರೀಕ್ಷೆಗಾಗಿ 4 ಸಾಲುಗಳಿಗೆ Dr. Soil ಹಾಕಲಿಲ್ಲ. ಒಂದು ತಿಂಗಳಲ್ಲಿ ನನಗೆ ಸ್ಪಷ್ಟ ವ್ಯತ್ಯಾಸ ಕಂಡುಬಂತು. ನಮ್ಮದು ಕೂಳೆ ಬೆಳೆ ಸಾಕಷ್ಟು ರವದಿ ಇತ್ತು. Dr. Soil ಬಳಸಿದ ತಾಕುಗಳಲ್ಲಿ ರವದಿ ಸಾಕಷ್ಟು ಕರಗಿತ್ತು. ಮಣ್ಣು ಮೃದುವಾಗಿದೆ. ಎರೆಹುಳುಗಳು ಕಾಣಿಸಿಕೊಂಡವು. ದಳಗಳು ತಾಜಾ ಹೊಳಪಿನಿಂದ ಕಂಗೊಳಿಸಿದವು. ಮರಿಗಳು ಸದೃಢವಾಗಿ ಬಂದವು. ಬಂದ ಮರಿಗಳೆಲ್ಲಾ ಸದೃಢವಾಗಿ ಬೆಳೆಯುತ್ತಿವೆ. ಈಗ 3 ತಿಂಗಳು ನನ್ನ ಕಬ್ಬಿನ ಗದ್ದೆಯಲ್ಲಿ 4 ರಿಂದ 5 ಗಣಿಕೆ ಗಿಂತ ಹೆಚ್ಚು ಬೆಳವಣಿಗೆಯಾಗಿದೆ. ನನ್ನ ಪಕ್ಕದ ತೋಟ 6 ತಿಂಗಳ ರಾಸಾಯನಿಕ ಬೆಳೆಗೆ ನಮ್ಮ 3 ತಿಂಗಳ ಸಾವಯವ ಕೃಷಿ ಬೆಳೆಗೆ ಸರಿಸಮವಾಗಿ ಬೆಳೆದಿದೆ. ಈ ವ್ಯತ್ಯಾಸಗಳನ್ನು ನನ್ನ ಮನೆಯಲ್ಲಿ ನನ್ನ ತಮ್ಮ, ತಾಯಿ, ತಂದೆ ಎಲ್ಲರೂ ಗುರುತಿಸುತ್ತಾರೆ. 5 ಅಡಿ ಅಂತರದ ಸಾಲುಗಳನ್ನು ನಾವು ಮಾಡಿದ್ದೇವೆ. ಈಗ ತೋಟದ ಒಳಗೆ ಹೋಗಲು ಆಗುವುದಿಲ್ಲ. ಅಷ್ಟು ಸಮೃದ್ಧಿಯಾಗಿ ಬೆಳೆದಿದೆ. ಯಾವುದೇ ರಾಸಾಯನಿಕ ಸಿಂಪರಣೆಗಳನ್ನು ಮಾಡಿಲ್ಲ, ಯಾವುದೇ ರೋಗಬಾಧೆ ಇಲ್ಲ. ನಮ್ಮಲ್ಲಿ ಸಾಕಷ್ಟು ನೀರಿದೆ. ಆದರೆ ಈಗ ಹೆಚ್ಚು ನೀರು ಕೊಡುವ ಅವಶ್ಯಕತೆ ಕಾಣುತ್ತಿಲ್ಲ. ಒಂದು ಎಕರೆಗೆ 50 ಲೀಟರ್ Dr. Soil ಮಾತ್ರ ನೀಡಿದ್ದೇವೆ. ರಾಸಾಯನಿಕ ಕೃಷಿಗೆ ಹೋಲಿಸಿದರೆ ಖರ್ಚು ಬಹಳ ಕಡಿಮೆ. ಇತ್ತೀಚೆಗೆ ಸಾವಯವ ಬೆಲ್ಲಕ್ಕೆ ಬಹಳ ಬೇಡಿಕೆ ಬರುತ್ತಿದೆ. ಸಾವಯವ ಕೃಷಿಯಲ್ಲಿ ಬೆಳೆದ ಕಬ್ಬಿನಿಂದ ಸಾವಯವ ಬೆಲ್ಲ ತಯಾರಿಸಿದರೆ ರೈತರಿಗೆ ಹೆಚ್ಚು ಲಾಭವಾಗಬಹುದು.

# ನನ್ನ 15 ವರ್ಷದ ಚಾಟ್ನಿ ಅನುಭವದಲ್ಲಿ ಈ ತೋಟ ನನಗೆ ಅಚ್ಚರಿ ಮೂಡಿಸಿತು...!



**ಈರಣ್ಣಗೌಡ ಬಸವಗೌಡ ನ್ಯಾಮಗೌಡ, ಗಲಗಲಿ, ಬೀಳಗಿ.ತಾ. ಬಾಗಲಕೋಟೆ**

ನಮಗೆ ನಾಲ್ಕು ಎಕರೆ ದ್ರಾಕ್ಷಿ ತೋಟ ಇದೆ. ಅದರಲ್ಲಿ ಒಂದು ಎಕರೆಗೆ ನಾನು Dr. Soil ಹಾಕಿ ಸಾವಯವ ಕೃಷಿ ಮಾಡಿದ್ದೇನೆ. ಯಾವುದೇ ರಾಸಾಯನಿಕ ಬಳಕೆ ಮಾಡಿಲ್ಲ. ಉಳಿದ 3 ಎಕರೆ ಪೂರ್ತಿ ರಾಸಾಯನಿಕ ಮಾಡಿದ್ದೇನೆ. ಚಾಟ್ನಿ ಮಾಡುವ ಕಾರ್ಮಿಕ ಸಾಗರ್ Dr. Soil ಬಳಸಿದ ತೋಟದ ಬೆಳವಣಿಗೆ, ಬದಲಾವಣೆ ಕಂಡು ಬಹಳ ಆಶ್ಚರ್ಯಪಟ್ಟ ಕಡ್ಡಿಗಳು ಬಹಳ ಮೃದುವಾಗಿದ್ದು, ಚೆನ್ನಾಗಿದೆ, ಕಡ್ಡಿಗಳು ಆರೋಗ್ಯವಾಗಿವೆ. ಕಾರ್ಮಿಕ ಸಾಗರ್ ಹೇಳುವಂತೆ ಇದುವರೆಗೂ ನಾನು ಎಂದೂ ಇಷ್ಟು ಚೆನ್ನಾಗಿ ಚಾಟ್ನಿ ಮಾಡಿದ ತೋಟ ನೋಡಲಿಲ್ಲ. 2 ದಿನದ ಕೆಲಸ ಒಂದು ದಿನದಲ್ಲಿ ಮುಗಿದಿದೆ. ಬೆಳೆ ಬಹಳ ಚೆನ್ನಾಗಿದೆ. Dr. Soil ನಲ್ಲಿ ಎಂತಹ ಅದ್ಭುತ ಶಕ್ತಿ ಇದೆ ಎಂದು ಆಶ್ಚರ್ಯಪಟ್ಟನು. ನಾನು ಸಹ ತೋಟದಲ್ಲಿ ಗಮನಿಸಿದಾಗ Dr. Soil ಬಳಸಿದ ತೋಟದಲ್ಲಿ ಮಣ್ಣು ಮೃದುವಾಗಿದೆ. ಎರೆಹುಳು ಅಲ್ಲಲ್ಲಿ ಕಾಣ್ತಾ ಇದೆ. ಖರ್ಚು ಕೂಡ ಕಡಿಮೆಯಾಗಿದೆ. 1 ಎಕರೆಗೆ 50 ಲೀ. Dr. Soil ಬಳಸಿದ್ದೇನೆ. ತೋಟ ರೋಗರಹಿತವಾಗಿದೆ. ಬೆಳವಣಿಗೆ ವೇಗವಾಗಿದೆ. ಮುಂದೆ ಫಸಲು ಚೆನ್ನಾಗಿ ಬರುವ ನಿರೀಕ್ಷೆ ಇದೆ.

ದ್ರಾಕ್ಷಿ ಕೃಷಿಯಲ್ಲಿ ಖರ್ಚಿಗೆ ಕಡಿವಾಣ ಹಾಕಲು Dr. Soil ಸಾವಯವ ಕೃಷಿ ಪದ್ಧತಿಯೇ ಸೂಕ್ತ. ಈ ನಿಟ್ಟಿನಲ್ಲಿ ರೈತರು ಪ್ರಯೋಗಿಕವಾಗಿ ಅರಿತು Dr. Soil ಅನ್ನು ಬಳಸಬಹುದು.



# ಮಣ್ಣಿನ ಜೈವಿಕ ಪರಿಸರ ಉಳಿಸುವುದು ನಮ್ಮ ಕರ್ತವ್ಯವಲ್ಲವೆ?

**ರಾಜು ಸತ್ಯಪ್ಪ ಬೈರುಗೋಳ್**

**ಅಧ್ಯಕ್ಷರು, ಸರ್ವೋದಯ ಸಿ.ಎಲ್.ಸಿ.ಗಳ ಒಕ್ಕೂಟ, ಗೋಕಾಕ, ರಾಜಾಪುರ. ಉಪಾಧ್ಯಕ್ಷರು ಪಿ.ಎಲ್.ಡಿ. ಬ್ಯಾಂಕ್, ಗೋಕಾಕ, ಗೋಕಾಕ, ಬೆಳಗಾಂ ಯುವ ಜಿಲ್ಲಾ ಪ್ರಶಸ್ತಿ ವಿಜೇತ**

ಸಾವಯವ ಕೃಷಿಯಲ್ಲಿ ಉತ್ತಮ ಬೆಳೆ ಪಡೆಯಲು 4-5 ವರ್ಷಗಳು ಕಾಯಬೇಕು ಎಂಬ ತಪ್ಪು ಕಲ್ಪನೆ ಇತ್ತು. Dr. Soil ಬಳಸಿ ಸಾವಯವ ಕೃಷಿ ಮಾಡಿದಾಗ ಮೊದಲನೇ ಬೆಳೆಯಿಂದಲೇ ಸಮೃದ್ಧ ಫಸಲನ್ನು ನನ್ನ ತೋಟದಲ್ಲಿ ಪಡೆದಿದ್ದೇನೆ.

ನಾನು ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತಿದ್ದರು. ನನ್ನ ಮೂಲ ವೃತ್ತಿ ಒಕ್ಕಲುತನ, ಕೃಷಿ ನನ್ನ ಪ್ರೀತಿಯ ಕಸುಬು, ನನಗೆ ಕೃಷಿಯಲ್ಲಿ 12 ವರ್ಷಗಳ ಅನುಭವ ಇದೆ. ಪ್ರಾರಂಭದಲ್ಲಿ ಕಬ್ಬು, ಹತ್ತಿ, ಗೋವಿನ ಜೋಳ, ಸರಕು, ಗೋಧಿ ಬೆಳೆಯುತ್ತಿದ್ದೆ. ಇತ್ತೀಚೆಗೆ 4 ರಿಂದ 5 ವರ್ಷಗಳಿಂದ ಕಬ್ಬು, ಬಾಳೆ, ಟಮೋಟ, ಕರಬೂಜ, ಪರಂಗಿ, ದೊಣ್ಣೆ ಮೆಣಸಿನಕಾಯಿ, ಬದನೆ, ಚೆಂಡು ಹೂ, ಕಲ್ಲಂಗಡಿ, ಸವತೆ ಮುಂತಾದ ತೋಟದ ಬೆಳೆಗಳನ್ನು ಬೆಳೆಯುತ್ತಿದ್ದೇನೆ. ಎಲ್ಲ ಬೆಳೆಗಳನ್ನು ರಾಸಾಯನಿಕ ಕೃಷಿಯಲ್ಲಿ ನಮ್ಮ ಭಾಗದಲ್ಲಿ ಹೆಸರು ಮಾಡುವಂತೆ ಬೆಳೆದಿದ್ದೇನೆ. ಹೋದ ವರ್ಷ ಟಮೋಟ ಬೆಳೆ 2 ಎಕರೆಗೆ 160 ಟನ್ ದಾಖಲೆ ಬೆಳೆ ಬೆಳೆದಿದ್ದೆ ಚಂದನ ಟಿ.ವಿ.ಯಲ್ಲಿ ನಮ್ಮ ಸಾಧನೆಯನ್ನು ಪ್ರಸಾರ ಮಾಡಲಾಯಿತು. ಹೀಗೆ ಕೃಷಿಯಲ್ಲಿ ವಿಶೇಷ ಪ್ರೀತಿ ಇಟ್ಟುಕೊಂಡವ ನಾನು. ಆದರೆ! ನನ್ನ ಅಂತರಾಳದಲ್ಲಿ ಒಂದು ನೋವಿತ್ತು. ಟನ್‌ಗಟ್ಟಲೆ ರಾಸಾಯನಿಕ ಗೊಬ್ಬರಗಳನ್ನು, ವಿಷಗಳನ್ನು ಭೂಮಿಗೆ ಸುರಿಯುತ್ತಿದ್ದೇನೆ. ಹೀಗೆ ಮುಂದುವರೆದರೆ, ಭೂಮಿ ನಿರ್ಜೀವವಾಗಿ ಬೆಳೆ ಬೆಳೆಯಲಾಗದ ಪರಿಸ್ಥಿತಿಯಾದರೆ ಮುಂದೆ ಗತಿ ಏನು? ಅಲ್ಲದೆ ಇಷ್ಟೊಂದು ವಿಷಗಳನ್ನು ಸುರಿದು ವಿಷಪೂರಿತ ಆಹಾರ ಬೆಳೆಯುತ್ತಿರುವುದು ನನ್ನ ಅಂತರಾಳಕ್ಕೆ ಸಮಾಧಾನವಿರಲಿಲ್ಲ. ಆದರೂ ಅನಿವಾರ್ಯ ಪರಿಸ್ಥಿತಿಯಲ್ಲಿ ಕೃಷಿ ಮಾಡುತ್ತಿದ್ದೆ.

ಆ ಸಂದರ್ಭದಲ್ಲಿ ಸ್ನೇಹಿತರಾದ ಮಹಾದೇವ ಶಿವಪ್ಪ ಜೋಡಟ್ಟಿ ಸವಸುದ್ದಿರವರು ನಮ್ಮ ಕೃಷಿ ಗುರುಗಳಾದ ಶ್ರೀ ಕೆ.ಆರ್.ಹುಲ್ಲುನಾಚೇಗೌಡರನ್ನು ನಮ್ಮ ಮನೆಗೆ ಕರೆದುಕೊಂಡು ಬಂದರು. ಅವರು ತಿಳಿಸಿದ ಸಾವಯವ ಕೃಷಿ ಸತ್ಯಗಳು ನನ್ನ ಜೀವನದ ದಿಕ್ಕನ್ನೇ ಬದಲಾಯಿಸಿತು. ಕೃಷಿಯಲ್ಲಿ ಹೊಸ ಚೈತನ್ಯ ಮೂಡಿಸಿತು. ಅವರು ಬಂದಾಗ ನನ್ನ ತೋಟದಲ್ಲಿ ಸವತೆ, ಟಮೋಟ, ಚೆಂಡುಹೂ, ಕಲ್ಲಂಗಡಿ, ಕಬ್ಬು, ದೊಣ್ಣೆ ಮೆಣಸಿನಕಾಯಿ ಬೆಳೆಗಳು ಇದ್ದವು. ನಾನು ಒಮ್ಮೆಗೆ Dr. Soil ಸಾವಯವ ಕೃಷಿ ಬದಲಾಯಿಸಿಕೊಳ್ಳಲು ನಿರ್ಧರಿಸಿದೆ. ಆ ದಿನ ರಾತ್ರಿಯೇ Drip ಮೂಲಕ ಎಕರೆಗೆ 50 ಲೀ. ಹಾಗೆ Dr. Soil ಬಿಟ್ಟೆ 15 ದಿನಗಳಲ್ಲಿ ನನಗೆ ಆಶ್ಚರ್ಯವಾಯಿತು. ಎಲ್ಲ ಬೆಳೆಗಳು ಸಮೃದ್ಧಿಯಾಗಿ ಬೆಳೆದವು.

ಸವತೆ ಸಸಿ ಮಾಡಿ ಹಚ್ಚಿದ್ದು 1 ತಿಂಗಳಿಗೆ ಫಸಲು ಪ್ರಾರಂಭವಾಯಿತು. 30 ಗುಂಟೆಗೆ 20 ಟನ್ ಸವತೆ ಬೆಳೆದಿದ್ದೇನೆ. ಬೆಳೆ ಇನ್ನೂ ಕೊಯ್ಲು ಬರುತ್ತಿದೆ. 70 ಸಾವಿರದಷ್ಟು ಖರ್ಚು ಆಗಿತ್ತು. ಸವತೆಯಲ್ಲಿ 2 ಲಕ್ಷ ಹಣ ಬಂದಿದೆ. ಪ್ರತಿದಿನ ಗೊಬ್ಬರ ಬಿಡುವ, ಔಷಧಿ ಸಿಂಪರಣೆ ಮಾಡುವ ಯಾವುದೇ ಒತ್ತಡವಿಲ್ಲ. ಒಂದು ಬಾರಿ ಒಮ್ಮೆಗೆ 50 ಲೀ. Dr. Soil ಬಿಟ್ಟಿದ್ದೇನೆ. ಬೆಳೆ ಸಮಾಧಾನಕರವಾಗಿದೆ.

ಟಮೋಟ ಸಸಿಗೆ ವಯಸ್ಸಾಗಿತ್ತು. ನೋಡೋಣ ಎಂದು ನಾಟಿ ಮಾಡಿದೆ. Dr. Soil ಬಿಟ್ಟೆ ನೀವು ಬಂದು ನೋಡಬಹುದು. ಟಮೋಟ ಎಷ್ಟು ಸಮೃದ್ಧಿಯಾಗಿ ಬೆಳೆದಿದೆ ಎಂದು ಅದರ ಹೂ ಮಿಡಿಗಾಯಿಗಳು ಕಣ್ಣಿಗೆ ಹಬ್ಬವನ್ನು ಉಂಟುಮಾಡುತ್ತವೆ.

ಚೆಂಡು ಹೂ ಪ್ರತಿ ವರ್ಷ ನಾನು ನನ್ನ ಕೆಲವು ಸ್ನೇಹಿತರು ಬೆಳೆಯುತ್ತೇವೆ. ನಾವು Dr. Soil ಚೆಂಡುಹೂವಿನ ತೋಟಕ್ಕೆ ಬಿಟ್ಟಿದ್ದೇನೆ. ಚೆಂಡು ಹೂವಿನ ಗಿಡ ಸಮೃದ್ಧಿಯಾಗಿ ಬೆಳೆದಿದೆ. ಹೂಗಳ ಗಾತ್ರ ಬಹಳ ದೊಡ್ಡದಾಗಿದೆ. ರಾಸಾಯನಿಕ ಪದ್ಧತಿಯಲ್ಲಿ ಬೆಳೆದ ಮೂರು ಹೂಗಳಿಗೆ ನಮ್ಮ ಒಂದು ಹೂ ಸಮ. ಸಾಕಷ್ಟು ಮೊಗ್ಗುಗಳು ಅಭಿವೃದ್ಧಿಯಾಗಿವೆ. ಗಿಡ ಆರೋಗ್ಯವಾಗಿದೆ. ಕೀಟನಾಶಕಗಳ ಬಳಕೆ ಕಡಿಮೆಯಾಗಿದೆ. ಕೇವಲ ಸಾವಯವ ಸಿಂಪರಣೆ ಸಸ್ಯ ಸಂರಕ್ಷಕ್ ಮಾತ್ರ ಸಿಂಪರಣೆ ಮಾಡಿದ್ದೇನೆ.

ಈಗಷ್ಟೇ ಲವಣಿ ಮಾಡಿರುವ ದೊಣ್ಣೆ ಮೆಣಸಿನಕಾಯಿ ಹಾಗೂ ಕಬ್ಬಿಗೆ Dr. Soil ಬಿಟ್ಟಿದ್ದೇನೆ. ಬೆಳೆ ಬಹಳ ಚೆನ್ನಾಗಿ ಬರುತ್ತದೆ. ಹೀಗೆ ನಾನು ಸ್ವತಹ ನನ್ನ ಕೃಷಿಯಲ್ಲಿ Dr. Soilನ ಅದ್ಭುತ ಜಮತ್ಕಾರಗಳನ್ನು ಕಾಣುತ್ತಿದ್ದೇನೆ. Dr. Soil ಸಾವಯವ ಕೃಷಿಯಿಂದ ಕೆಲಸದ ಒತ್ತಡ ಕಡಿಮೆಯಾಗಿದೆ. ನೀರು ವಾರಕ್ಕೆ ಒಮ್ಮೆ ಕೊಡುತ್ತಿದ್ದೇನೆ. ವಿಷಮುಕ್ತ ಆಹಾರ ಬೆಳೆಯಬೇಕೆಂಬ ನನ್ನ ಹಂಬಲಕ್ಕೆ ಈಗ ಆತ್ಮವಿಶ್ವಾಸ ಬಂದಿದೆ. ಸಾವಯವ ಕೃಷಿಯನ್ನು ನಮ್ಮ ರೈತ ಸಮುದಾಯಕ್ಕೆ ಅರಿವು ಮೂಡಿಸಬೇಕೆಂದು ನಿರ್ಧರಿಸಿದ್ದೇನೆ. ನಮ್ಮ ಕೃಷಿ ಗುರುಗಳ ಮಾರ್ಗದರ್ಶನದಲ್ಲಿ ನನ್ನ ಕೈಲಾದ ಸೇವೆ ಮಾಡುತ್ತೇನೆ.

# ಬಂಗಾರದ ಬೆಳೆ ಸಾವಯವ ಬಾಳೆ

**ಧನಂಜಯ ನಕ್ಕಲಬಚ್ಚಹಳ್ಳಿ**

**ಚಿಕ್ಕಬಳ್ಳಾಪುರ ಜಿಲ್ಲೆ ನಕ್ಕಲಬಚ್ಚಹಳ್ಳಿಯ ಧನಂಜಯರವರು ವೃತ್ತಿಯಲ್ಲಿ ಕೃಷಿಕರು. ಯಶಸ್ವಿಯಾಗಿ ಸಾವಯವ ಬಾಳೆ ಬೆಳೆದಿದ್ದಾರೆ. ಇರುವ ಅಲ್ಪಸ್ವಲ್ಪ ನೀರಿನಲ್ಲಿ ಬಾಳೆ, ನುಗ್ಗೆ ಹಾಗೂ ಕೋಳಿ ಫಾರಂಗೂ ನೀರು ಬಳಸಿಕೊಂಡು, ಕಡಿಮೆ ನೀರಿನಲ್ಲಿ ಯಶಸ್ವಿಯಾಗಿ ಬೆಳೆ ಬೆಳೆಸಿದ್ದಾರೆ. ಬರದ ಜಿಲ್ಲೆಯಲ್ಲಿ ಬಾಳೆ ಇವರ ಕೈಹಿಡಿದಿದೆ. ಕೈತುಂಬಾ ಹಣ ಕೊಟ್ಟಿದೆ. ಸಾವಯವ ಕೃಷಿಯಲ್ಲಿ ಗೆದ್ದ ನಗು ಇವರ ಮುಖದಲ್ಲಿ ಇದೆ. ಇವರ ಸಂದರ್ಶನದಲ್ಲಿ ಇವರ ಮನದಾಳದ ಮಾತು ನಿಮಗೂ ಪ್ರೇರಣೆಯಾಗಬಹುದು.**



**ಕಡಿಮೆ ನೀರಿನಲ್ಲಿ ಕೈ ಹಿಡಿದ Dr. Soil ನನ್ನ ತೋಟದ ಮಣ್ಣು ಚಿನ್ನವಾಗಿದೆ. 20 ತಿಂಗಳಲ್ಲಿ 2 ಫಸಲು ಬಂದಿದೆ.**

**ಪ್ರಶ್ನೆ: ನಮಸ್ಕಾರ ಧನಂಜಯಣ್ಣರವರೆ?**
ಉತ್ತರ ನಮಸ್ಕಾರ ಸಾರ್.

**ಪ್ರಶ್ನೆ ಹೇಗಿದೆ ನಿಮ್ಮ ಕೃಷಿ?**
ಉತ್ತರ: ಬಹಳ ಚೆನ್ನಾಗಿದೆ.

**ಪ್ರಶ್ನೆ: ನೀವು ಯಾವ ಯಾವ ಬೆಳೆ ಬೆಳೆಯುತ್ತಿದ್ದೀರಿ?**
ಉತ್ತರ: ಬಾಳೆ, ನುಗ್ಗೆ, ಕೋಳಿಫಾರಂ ಇದೆ.

**ಪ್ರಶ್ನೆ: ನೀರಿನ ಅನುಕೂಲ ಹೇಗಿದೆ?**
ಉತ್ತರ: ನಗುತ್ತಾ ಕೊಳವೆ ಬಾವಿಯಲ್ಲಿ ಒಂದು ಇಂಚು ನೀರು ಬರ್‍ತಾ ಇದೆ.

**ಪ್ರಶ್ನೆ: ನೀವು ಸಾವಯವ ಕೃಷಿಗೆ ಏಕೆ ಬದಲಾದಿರಿ?**
ಉತ್ತರ: ನಾನು ಸಾವಯವ ಕೃಷಿಗೆ ಬರಲು Dr. Soil ಕಾರಣ. Dr. Soil ದ್ರವರೂಪದ ಸಾವಯವ ಗೊಬ್ಬರ ಮೊದಲನೇ ಬೆಳೆಯಲ್ಲೆ ನನಗೆ ಉತ್ತಮ ಬೆಳೆ ಬರುವ ಹಾಗೆ ಮಾಡಿತು. ಈಗ ನಾನು ಯಶಸ್ವಿ ಸಾವಯವ ಕೃಷಿಕನಾಗಿದ್ದೇನೆ.

**ಪ್ರಶ್ನೆ: ನೀವು ಬಾಳೆ ಬೆಳೆ ಯಾವಾಗ ಪ್ರಾರಂಭಿಸಿದ್ದೀರಿ?**
ಉತ್ತರ: ಅಕ್ಟೋಬರ್ – 2012ರಲ್ಲಿ ನಾನು ನಾಟಿ ಮಾಡಿದೆ.

**ಪ್ರಶ್ನೆ: ಬಾಳೆ ನಾಟಿ ಮಾಡುವಾಗ ನೀವು ಏನೇನು ಗೊಬ್ಬರ ಕೊಟ್ಟಿದ್ದೀರಿ?**
ಉತ್ತರ: ಪ್ರತಿ ಸಸ್ಯಕ್ಕೆ ಸುಮಾರು 10 ಕೆ.ಜಿ ಕೊಟ್ಟಿಗೆ ಗೊಬ್ಬರ, 100 ಗ್ರಾಂ ಬೇವಿನ ಹಿಂಡಿ ಮಾತ್ರ ಕೊಟ್ಟಿದ್ದೆ.

**ಪ್ರಶ್ನೆ: ನಿಮಗೆ ಸಾವಯವ ಕೃಷಿ ಪರಿಚಯಿಸಿದ್ದವರು ಯಾರು?**
ಉತ್ತರ: ಶ್ರೀ ಕೆ.ಆರ್. ಹುಲ್ಲುನಾಚೇಗೌಡರು. ನನಗೆ Dr. Soil ಪರಿಚಯಿಸಿ ಬಾಳೆ ಒಂದು ಬಹುವಾರ್ಷಿಕ ಬೆಳೆ ನಿರಂತರವಾಗಿ 10 ಬೆಳೆ ತೆಗೆಯಬಹುದು. Dr. Soil ಸಾವಯವ ಕೃಷಿಯಲ್ಲಿ ಮಾಡಿ ಎಂದು ಪ್ರೇರೇಪಿಸಿದರು.

**ಪ್ರಶ್ನೆ: ನೀವು ಯಾವಾಗ Dr. Soil ಬಳಸಿದ್ದೀರಿ?**
ಉತ್ತರ: 2013ರ ಫೆಬ್ರವರಿ 14 ರಂದು ನಾನು Dr. Soil ಬಳಸಿದೆ. ಅಲ್ಲಿಯ ತನಕ ನನ್ನ ತೋಟಕ್ಕೆ ನಾನು ಯಾವುದೇ ಗೊಬ್ಬರ ನೀಡಿಲ್ಲ.

**ಪ್ರಶ್ನೆ: ನೀವು Dr. Soil ಬಳಸಿ ಎಷ್ಟು ದಿನಗಳಾಯಿತು?**
ಉತ್ತರ: ನಾನು Dr. Soil ಬಳಸಿ 16 ತಿಂಗಳಾಯಿತು.

**ಪ್ರಶ್ನೆ: Dr. Soil ಬಳಸಿದ ಮೇಲೆ ಭೂಮಿಯಲ್ಲಿ ಏನೇನು ಬದಲಾವಣೆ ಬಂತು?**
ಉತ್ತರ: ಮಣ್ಣು ಮೃದುವಾಯಿತು. ಎರೆಹುಳುಗಳು ಕಾಣಿಸಿಕೊಂಡವು. ಮಣ್ಣಿನಲ್ಲಿ ತೇವಾಂಶ ಹಿಡಿದಿಟ್ಟುಕೊಳ್ಳುವ ಶಕ್ತಿ ಹೆಚ್ಚಾಯಿತು.

**ಪ್ರಶ್ನೆ: ನೀವು Dr. Soil ಬಿಟ್ಟು ಇನ್ನೇನು ಕೊಟ್ಟಿದ್ದೀರಿ?**
ಉತ್ತರ: ಕೊಟ್ಟಿಗೆ ಗೊಬ್ಬರ, ತಿಪ್ಪೆಕಸ ಬಿಟ್ಟು ಇನ್ನೇನು ಕೊಟ್ಟಿಲ್ಲ. ಬಾಳೆ ಗಿಡದ ಒಂದು ಎಲೆ ಕೂಡ ತೋಟದಿಂದ ಆಚೆ ಹಾಕಿಲ್ಲ.

**ಪ್ರಶ್ನೆ: ನೀರು ಹೇಗೆ ನಿರ್ವಹಣೆ ಮಾಡುತ್ತೀರಿ?**
ಉತ್ತರ: ವಾರಕ್ಕೆ ಅಥವಾ 10 ದಿನಕ್ಕೆ ಒಂದು ಸಾರಿ ನೀರು Drip ಮೂಲಕ ಕೊಡುತ್ತಾ ಇದ್ದೀನಿ. ಮಧ್ಯದ ಸಾಲಿನಲ್ಲಿ Drip ಇದೆ.

**ಪ್ರಶ್ನೆ: ಎಷ್ಟು ಬೆಳೆ ಬಂದಿದೆ?**
ಉತ್ತರ: 20 ತಿಂಗಳಲ್ಲಿ 2 ಬೆಳೆ ಬಂದಿದೆ. ಇನ್ನೂ 5 ತಿಂಗಳಲ್ಲಿ 3ನೇ ಬೆಳೆ ಕೈಗೆ ಸಿಗುತ್ತೆ.

**ಪ್ರಶ್ನೆ: ಇದುವರೆಗೂ Dr. Soil ಗೆ ಎಷ್ಟು ಹಣ ಖರ್ಚಾಗಿದೆ?**
ಉತ್ತರ: ಎರಡು ಬೆಳೆಯಿಂದ ಸೇರಿ 23 ಸಾವಿರ ಖರ್ಚಾಗಿದೆ.

**ಪ್ರಶ್ನೆ: ಬಾಳೆಗೊನೆಗಳ ಸರಾಸರಿ ಇಳುವರಿ ಎಷ್ಟು?**
65 ರಿಂದ 70 ಕೆ.ಜಿ. ಗೊನೆಗಳು ಬಂದಿವೆ. ಆದರೆ ಸರಾಸರಿ 50 ಕೆ.ಜಿ.ಬಂದಿವೆ.

**ಪ್ರಶ್ನೆ: ಮೊದಲನೇ ಬೆಳೆಯಲ್ಲಿ ನಿಮ್ಮ ಆದಾಯ ಎಷ್ಟು?**
ಉತ್ತರ: ಬೆಳೆ ಚೆನ್ನಾಗಿ ಸಿಕ್ಕು. ಅರ್ಧ ಎಕರೆಗೆ ನನಗೆ 1 ಲಕ್ಷ 75 ಸಾವಿರದಿಂದ 2 ಲಕ್ಷದ ತನಕ ಆದಾಯ ಬಂದಿದೆ.

**ಪ್ರಶ್ನೆ: ಎರಡನೇ ಬೆಳೆಯಲ್ಲಿನ ಆದಾಯ ಎಷ್ಟಾಗುತ್ತದೆ?**
ಉತ್ತರ: ಇನ್ನೂ ಸ್ವಲ್ಪ ಗೊನೆಗಳನ್ನು ಫಸಲು ಮಾಡಬೇಕು. ಸ್ವಲ್ಪ ಹೆಚ್ಚು ಕಡಿಮೆ 2 ಲಕ್ಷ 50 ಸಾವಿರ ಬರಬಹುದು.

**ಪ್ರಶ್ನೆ: 16 ತಿಂಗಳಿಂದ ನೀವು Dr. Soil ಬಳಸಿ ಸಾವಯವ ಕೃಷಿ ಮಾಡಿದ್ದೀರಿ. ಈಗ ನಿಮ್ಮ ಮಣ್ಣು ಹೇಗಿದೆ?**
ಉತ್ತರ: ನಗುತ್ತಾ ನನ್ನ ಮಣ್ಣು ಚಿನ್ನವಾಗಿದೆ. ಜೈವಿಕ ಪರಿಸರ ಸೃಷ್ಟಿಯಾಗಿದೆ. ಎರೆಹುಳುಗಳು ತಾಂಡವಾಡುತ್ತಿವೆ. ಎರೆಗೊಬ್ಬರ ಕಾರ್ಖಾನೆ ನನ್ನ ಮಣ್ಣಿನಲ್ಲಿ ಇದೆ.

**ಪ್ರಶ್ನೆ: ಬಾಳೆಗೆ ನೀವು ಯಾವುದಾದರೂ ಸಿಂಪರಣೆ ಮಾಡಿದ್ದೀರಾ?**
ಉತ್ತರ: ಯಾವುದೇ ರೋಗ ಬಂದಿಲ್ಲ, ಯಾವುದೇ ಸಿಂಪರಣೆ ಮಾಡಿಲ್ಲ.

**ಪ್ರಶ್ನೆ: ಸಾವಯವ ಬಾಳೆ ಕೃಷಿ ಬಗ್ಗೆ ನಿಮಗೆ ಏನು ಅನಿಸುತ್ತಿದೆ?**
ಉತ್ತರ: ಬಹಳ ನೆಮ್ಮದಿ ಇದೆ? ಯಾವುದೇ ಒತ್ತಡವಿಲ್ಲ. ಕೆಲಸ ಕಡಿಮೆ, ಆದಾಯ ಬಹಳ ಚೆನ್ನಾಗಿದೆ. ವಿಷರಹಿತ ಕೃಷಿಯಿಂದ ನಾನು ಆರೋಗ್ಯವಾಗಿದ್ದೇನೆ. 16 ತಿಂಗಳಿನಿಂದ ನಾನು ರಾಸಾಯನಿಕ ಗೊಬ್ಬರ, ವಿಷ ಮುಟ್ಟಿಲ್ಲ ನನಗೆ ಬಹಳ ಸಮಾಧಾನ ಇದೆ. ನೂರಾರು ರೈತರು ನಮ್ಮ ತೋಟ ನೋಡಲು ಬರುತ್ತಿದ್ದಾರೆ ಮತ್ತು ಮೆಚ್ಚುಗೆ ಸೂಚಿಸುತ್ತಿದ್ದಾರೆ.